14 March 2026 Saturday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ನಮ್ಮ ಬದುಕಿನಲ್ಲಿ ನಾವು ಸಂಗ್ರಹಿಸ ಬೇಕಾಗಿದ್ದು ಸಂತೋಷದ ಕ್ಷಣಗಳನ್ನೇ ಹೊರತು ದುಬಾರಿ ಮಾತುಗಳನ್ನಲ್ಲ!

-ಸ್ನೇಹಾ ಆನಂದ್

info.varthaman@gmail.com



ಟೆಟ್ರಾ ಹಾಲಿಗೆ 1 ರೂ. ಬೋನಸ್: ಬಮೂಲ್ ಅಧ್ಯಕ್ಷ ಡಿ.ಕೆ.ಸುರೇಶ್ ಪುಟ ಸಂ. 2



ಸ್ವಚ್ಛ ಸರ್ವೇಕ್ಷಣೆ 2026ಕ್ಕೆ ಸಿದ್ಧತೆ: ಎಲ್ಲೆಂದರಲ್ಲಿ ಕಸ ಎಸೆದರೆ ಬೀಳಲಿದೆ ದಂಡ ಪುಟ ಸಂ. 2



ಸ್ತ್ರೀಯರೊಂದಿಗೆ ಪೊಲೀಸರು ಗೌರವಯುತವಾಗಿ ವರ್ತಿಸಿ ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 122 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

# ಸಿದ್ದಗಂಗಾ ಮಠದಲ್ಲಿ ಸೌದೆ ಒಲೆಯಲ್ಲಿಯೇ 30 ಸಾವಿರ ಭಕ್ತರಿಗೆ ಅಡುಗೆ

## ಮಠದಲ್ಲಿ ಶ್ರೀ ಶಿವಕುಮಾರ ಸ್ವಾಮೀಜಿ ಕಾಲದಿಂದಲೇ ಸೌರಶಕ್ತಿ ಬಳಕೆ । ಸೌದೆ ಹೊಟ್ಟು, ಭತ್ತದ ಹೊಟ್ಟು, ಅಡಿಕೆ, ತೆಂಗಿನ ಚಿಪ್ಪು ಬಳಸಿ ಪ್ರಸಾದ ತಯಾರಿ

**ತುಮಕೂರು:** ತುಮಕೂರಿನ ಸಿದ್ದಗಂಗಾ ಮಠದಲ್ಲಿ ಪ್ರತಿ ನಿತ್ಯ ಸುಮಾರು 30 ಸಾವಿರ ಜನರಿಗೆ ಸೌದೆ ಒಲೆಯಿಂದಲೇ ಆಹಾರ ತಯಾರಿಸಿ ಬಡಿಸಲಾಗುತ್ತಿದೆ. ಶ್ರೀ ಶಿವಕುಮಾರ ಸ್ವಾಮೀಜಿ ಅವರ ಕಾಲದಿಂದಲೂ ಮಠದಲ್ಲಿ ಸೌದೆ ಒಲೆಯನ್ನು ಬಳಸಲಾಗುತ್ತಿದೆ. ಗ್ಯಾಸ್ ಮೇಲೆ ಅವಲಂಬಿತವಾಗದೇ ಇರುವುದು ಪ್ರಸ್ತುತ ಸನ್ನಿವೇಶದಲ್ಲಿ ವಿಶೇಷವಾಗಿ ಗಮನ ಸೆಳೆಯುತ್ತಿದೆ.

ಮಠದಲ್ಲಿ ನಿತ್ಯ 10 ಸಾವಿರ ಮಕ್ಕಳು ಮೂರು ಹೊತ್ತು ಊಟ ಮಾಡುತ್ತಾರೆ. ಇವರೆಲ್ಲರಿಗೂ ಬೆಳಗ್ಗೆ ಉಪಾಹಾರ, ಮಧ್ಯಾಹ್ನ ಮತ್ತು ರಾತ್ರಿ ಅನ್ನ, ಸಾಂಬಾರು ಹಾಗೂ ಮುದ್ದೆ ನೀಡಲಾಗುತ್ತದೆ. ಸೌದೆ ಬಳಸಿ ಆಹಾರ ತಯಾರಿಸಲಾ





ಗುತ್ತದೆ. ಅನೇಕ ವರ್ಷಗಳಿಂದಲೂ ಎಲ್‌ಪಿಜಿ ಸಿಲಿಂಡರ್‌ಗಳನ್ನು ಅವಲಂಬಿಸದೇ ಇಲ್ಲಿ ಅಡುಗೆ ಕೆಲಸ ನಡೆಯುತ್ತಿದೆ.

ಗ್ಯಾಸ್ ಕೊರತೆಯ ಪ್ರಸ್ತುತ ಸನ್ನಿವೇಶದ ಕುರಿತು ಮಾತನಾಡಿರುವ ಮಠದ ಶ್ರೀ ಸಿದ್ದಲಿಂಗ ಸ್ವಾಮೀಜಿ ಅವರು, ಆದಷ್ಟು ಬೇಗ ಯುದ್ಧ ಪೂರ್ಣಗೊಳ್ಳಲಿ. ವಿವಿಧ ದೇಶಗಳಲ್ಲಿ ನಿರ್ಮಾಣವಾಗಿರುವ ಆತಂಕ ನಿವಾರಣೆಯಾಗಲಿ. ಯುದ್ಧ ನಿಲ್ಲದಿದ್ದರೆ ಜನರು ಸೌದೆಗಾಗಿ ಅರಣ್ಯ ಪ್ರದೇಶಗಳತ್ತ ಹೋಗುತ್ತಾರೆ. ಮರಗಿಡಗಳನ್ನು ಕಡಿಯಲು ಮುಂದಾಗುತ್ತಾರೆ ಎಂದು ಆತಂಕ ವ್ಯಕ್ತಪಡಿಸಿದರು.

ಪ್ರತಿನಿತ್ಯ ಮಠಕ್ಕೆ ಸಾವಿರಾರು ಭಕ್ತರು ಆಗಮಿಸುತ್ತಾರೆ. ಉತ್ತರ ಕರ್ನಾಟಕದಿಂದ ಬೆಂಗಳೂರಿಗೆ ಹೋಗುವ ವಿವಿಧ ಸಂಘಟನೆಗಳ ಕಾರ್ಯಕರ್ತರು ಮಾರ್ಗಮಧ್ಯೆ ಮಠಕ್ಕೆ ಬಂದು ಊಟ ಮಾಡಿ ಹೋಗುತ್ತಾರೆ. ಹೀಗಾಗಿ ಪ್ರತಿದಿನ ಮಠದ ಮಕ್ಕಳನ್ನು ಹೊರತುಪಡಿಸಿ ಸಾವಿರಾರು ಮಂದಿ ಊಟ ಸೇವಿಸುತ್ತಾರೆ. ಪ್ರತಿನಿತ್ಯ ಅನ್ನ

ಪುಟ 2ಕ್ಕೆ

### ಗವಿಮಠದಲ್ಲೂ ನಿತ್ಯ 4–5 ಸಾವಿರ ಮಂದಿಗೆ ಪ್ರಸಾದ

ಕೊಪ್ಪಳದ ಧಾರ್ಮಿಕ ಕೇಂದ್ರ ಗವಿಮಠ ಹಾಗೂ ಹುಬ್ಬಳ್ಳಿಯ ಸಿದ್ಧಾರೂಢರ ಮಠದಲ್ಲಿಯೂ ಅಡುಗೆ ಅನಿಲ ಕೊರತೆಯ ನಡುವೆಯೂ ದಾಸೋಹ ಹಾಗೂ ವಸತಿ ನಿಲಯದ ಊಟ ವ್ಯವಸ್ಥೆಗೆ ಯಾವುದೇ ತೊಂದರೆ ಉಂಟಾಗಿಲ್ಲ. ಕೊಪ್ಪಳದ ಗವಿಮಠದಲ್ಲಿ ಪ್ರಾಚೀನ ಕಾಲದಿಂದಲೂ ಸೌದೆ ಒಲೆ ಜೊತೆಗೆ ಸೌದೆ ಬಾಯ್ಲರ್

ಪುಟ 2ಕ್ಕೆ

# ಉಸಿರಿರುವವರೆಗೂ ರಾಜಕೀಯ

## ಸೋತಾಗಲೂ ಜನರ ಸೇವೆ ಬಿಟ್ಟಿಲ್ಲ । ಮುಖ್ಯಮಂತ್ರಿ ಸಿದ್ದರಾಮಯ್ಯ



**ಮೈಸೂರು:** ನನ್ನ ಕೊನೆ ಉಸಿರು ಇರುವವರೆಗೂ ರಾಜಕೀಯದಲ್ಲಿ ಇರುತ್ತೇನೆ. ನಾನು ರಾಜಕೀಯದಲ್ಲಿ ಹಲವು ಸೋಲು–ಗೆಲವು ಕಂಡಿದ್ದೇನೆ. ಸೋತಾಗಲೂ ಜನರ ಸೇವೆ ಬಿಟ್ಟಿಲ್ಲ. ಜನರ ಸೇವೆ ಮಾಡುತ್ತಲೇ ಇರುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಮೈಸೂರಿನ ವರಕೂಡು ಗ್ರಾಮದಲ್ಲಿ ಬೀರೇಶ್ವರ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿ ಅವರು ಮಾತನಾಡಿದರು.

ಈಗೀಗ ಕ್ಷೇತ್ರಕ್ಕೆ ಹೆಚ್ಚು ಬರಲು ನನ್ನಿಂದ ಆಗುತ್ತಿಲ್ಲ. ನನ್ನ ಮಗ ಯತೀಂದ್ರ ಬರುತ್ತಾರೆ. ನಿಮ್ಮ ಕಷ್ಟಸುಖಕ್ಕೆ ಅವರು ಸ್ಪಂದಿಸುತ್ತಾರೆ. ನನ್ನನ್ನು ಬೆಳೆಸಿದಂತೆ ಯತೀಂದ್ರನನ್ನು ರಾಜಕೀಯವಾಗಿ ಬೆಳೆಸಿ ಎಂದು ಕ್ಷೇತ್ರದ ಜನರಿಗೆ ಮನವಿ ಮಾಡಿದರು. ಗ್ರಾಮದ ಮುಖಂಡರು ಹೆಲಿಪ್ಯಾಡ್ ಬಳಿಯಿಂದ ಸಿದ್ದರಾಮಯ್ಯ ಅವರನ್ನು ತೆರೆದ ವಾಹನದಲ್ಲಿ ಮೆರವಣಿಗೆಯಲ್ಲಿ ದೇಗುಲದ ಆವರಣಕ್ಕೆ ಕರೆತಂದರು.

### ಸೇಬಿನ ಹಾರ, ಬೆಳ್ಳಿಗದೆ ಅರ್ಪಣೆ

**ಮೈಸೂರು:** ವರುಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವರುಕೋಡು ಗ್ರಾಮಕ್ಕೆ ಆಗಮಿಸಿದ ಸಿಎಂ ಸಿದ್ದರಾಮಯ್ಯ ಅವರಿಗೆ ಗ್ರಾಮಸ್ಥರು ಅದ್ದೂರಿಯಾಗಿ ಸ್ವಾಗತಿಸಿದರು. ಸಿದ್ದರಾಮಯ್ಯ ಆಗಮಿಸುತ್ತಿದ್ದಂತೆಯೇ ಜೈಕಾರ ಕೂಗಿ ಸಂಭ್ರಮಿಸಿದರು. ವಿಧಾನ ಪರಿಷತ್ ಸದಸ್ಯರೂ ಆದ ಪುತ್ರ ಡಾ.ಯತೀಂದ್ರ ಸಿದ್ದರಾಮಯ್ಯ ಅವರೊಂದಿಗೆ ತೆರೆದ ವಾಹನದಲ್ಲಿ ಬಂದ ಸಿದ್ದರಾಮಯ್ಯ ಅವರಿಗೆ ಅಭಿಮಾನಿಗಳು ಕ್ರೇನ್



ಮೂಲಕ ಸೇಬಿನ ಹಾರ ಹಾಕಿದರು. ಕಾರ್ಯಕ್ರಮದಲ್ಲಿ ಬೆಂಬಲಿಗರು ಬೆಳ್ಳಿ ಗದೆ ನೀಡಿ ಗೌರವಿಸಿದರು.

### ಶುದ್ಧ ಭಕ್ತಿ ಇಲ್ಲದ ಪೂಜೆ ಸಾರ್ಥಕವಲ್ಲ

***ವರಕೋಡು ಬೀರೇಶ್ವರಸ್ವಾಮಿ ದೇಗುಲ ಪುನರ್ ಪ್ರತಿಷ್ಠಾಪನೆ**

**ಮೈಸೂರು:** ದೇವರು ಶುದ್ಧವಾದ ಭಕ್ತಿಗೆ ಮಾತ್ರವೇ ಒಲಿಯುತ್ತಾನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ತಾಲ್ಲೂಕಿನ ವರುಣ ಹೋಬಳಿಯ ವರಕೋಡು ಗ್ರಾಮದಲ್ಲಿ ವರಕೋಡು ಗಡಿ ಗುರುಮಠದ ಆವರಣದಲ್ಲಿ ಶುಕ್ರವಾರ ಆಯೋಜಿಸಲಾಗಿದ್ದ ಬೀರೇಶ್ವರ ಸ್ವಾಮಿ ದೇವಸ್ಥಾನದ ಪುನರ್ ಪ್ರತಿಷ್ಠಾಪನೆ ಕುಂಭಾಭಿಷೇಕ ಹಾಗೂ ಮಹಾ

ಪುಟ 2ಕ್ಕೆ



### 16ರಂದು ಸಿಎಂ 'ಡಿನ್ನರ್ ಪಾರ್ಟಿ'

**ಬೆಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾರ್ಚ್ 16ರಂದು ಕಾಂಗ್ರೆಸ್ ಸಚಿವರು ಮತ್ತು ಶಾಸಕರಿಗಾಗಿ ಡಿನ್ನರ್ ಪಾರ್ಟಿ ಆಯೋಜಿಸಿರುವುದು ರಾಜಕೀಯ ವಲಯದಲ್ಲಿ ಅಚ್ಚರಿಗೆ ಕಾರಣವಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಸರ್ಕಾರಿ ನಿವಾಸ ಕಾವೇರಿಯಲ್ಲಿ ಡಿನ್ನರ್ ಸಭೆ ಆಯೋಜಿಸಿರುವುದು ಕುತೂಹಲ ಮೂಡಿಸಿದೆ. ವಿಧಾನಸಭೆ

ಪುಟ 2ಕ್ಕೆ

### ಡಿನ್ನರ್ ಪಾರ್ಟಿಗೆ 16 ಸಚಿವರಿಗೆ ಸಿಎಂ ಆಹ್ವಾನ

**ಬೆಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾ.16ರಂದು ಸೋಮವಾರ ರಾತ್ರಿ 7.30ಕ್ಕೆ ಸಚಿವರ ಸಭೆ ಕರೆದಿದ್ದಾರೆ. ಸಚಿವರು, ಪಕ್ಷದ ಶಾಸಕರನ್ನ ಆಗಾಗ್ಗೆ ಕರೆದು ಮಾತನಾಡಿಸುತ್ತಾರೆ ಎಂದು ಸಾರಿಗೆ ಸಚಿವ ರಾಮಲಿಂಗರೆಡ್ಡಿ ತಿಳಿಸಿದರು.

ಪುಟ 2ಕ್ಕೆ

# ಬಿಜೆಪಿ ಅಭ್ಯರ್ಥಿಗಳ ಆಯ್ಕೆಗೆ ಚರ್ಚೆ


## ಉಪ ಚುನಾವಣೆ ಕುರಿತು ಕೋರ್ ಕಮಿಟಿ ಸಭೆ: ಬಿ.ವೈ.ವಿಜಯೇಂದ್ರ

**ಬೆಂಗಳೂರು:** ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಗಳ ಮುಂಬರುವ ಉಪಚುನಾವಣೆಗೆ ಸಂಭಾವ್ಯ ಅಭ್ಯರ್ಥಿಗಳ ಆಯ್ಕೆ ಬಗ್ಗೆ ಪಕ್ಷದ ಕೋರ್ ಕಮಿಟಿ ಸಭೆಯಲ್ಲಿ ಚರ್ಚಿಸಲಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ಶುಕ್ರವಾರ ತಿಳಿಸಿದರು.

ಸಭೆಯಲ್ಲಿ ಪಕ್ಷದ ಕರ್ನಾಟಕ ಉಸ್ತುವಾರಿ ರಾಧಾ ಮೋಹನ್ ದಾಸ್ ಅಗರ್ವಾಲ್, ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ರಾಜ್ಯ ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರು ಮತ್ತಿತರ ಹಿರಿಯ ನಾಯಕರು ಭಾಗವಹಿಸಿದ್ದರು ಎಂದು ಹೇಳಿದರು.

ಸಭೆ ಬಳಿಕ ಮಾಧ್ಯಮಗಳ ಜೊತೆ ಮಾತನಾಡಿದ ವಿಜಯೇಂದ್ರ ಅವರು, ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಗಳ ಮುಂಬರುವ ಉಪಚುನಾವಣೆಗೆ ಅಭ್ಯರ್ಥಿಗಳ ಆಯ್ಕೆ ಕುರಿತು ಕೋರ್ ಕಮಿಟಿ ಸಭೆಯಲ್ಲಿ ಚರ್ಚೆ ನಡೆಸಲಾಯಿತು. ಎರಡು ಕ್ಷೇತ್ರಗಳಲ್ಲಿ ಪಕ್ಷದ ಟಿಕೆಟ್ ಬಯಸುತ್ತಿರುವ ವಿವಿಧ ನಾಯಕರ ಬಗ್ಗೆ ವಿವರ ವಾಗಿ ಚರ್ಚಿಸಲಾಗಿದೆ ಮತ್ತು ಸಭೆಯಲ್ಲಿ ಪರಿಗಣಿಸಲಾದ ಹೆಸರುಗಳನ್ನು ಅಂತಿಮ ನಿರ್ಧಾರಕ್ಕಾಗಿ ಪಕ್ಷದ ಹಿರಿಯ ನಾಯಕರಿಗೆ ರವಾನಿಸಲಾಗುವುದು ಎಂದು ಹೇಳಿದರು.

ಮುಂಬರುವ ಉಪ ಚುನಾವಣೆಯಲ್ಲಿ ಗೆಲುವು ಸಾಧಿಸಲು ಪಕ್ಷ ಸಾಮೂಹಿಕವಾಗಿ ಕೆಲಸ ಮಾಡಲು ನಿರ್ಧರಿಸಿದೆ. ಹಿಂದಿನ ಭಿನ್ನಾಭಿಪ್ರಾಯಗಳನ್ನು ಮರೆತು, ಎಲ್ಲಾ ಸಮಸ್ಯೆಗಳನ್ನು ಬದಿಗಿಟ್ಟು, ಚುನಾವಣೆಯಲ್ಲಿ ಗೆಲ್ಲಲು ಒಗ್ಗಟ್ಟಿನಿಂದ ಕೆಲಸ ಮಾಡಬೇಕೆಂದು ನಾವು ಎಲ್ಲರಿಗೂ ಕೇಳಿಕೊಂಡಿದ್ದೇವೆ ಎಂದು ಹೇಳಿದರು.



ದಾವಣಗೆರೆಯಲ್ಲಿ ಹಿಂದಿನ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಎದುರಿಸಿದ ಸಮಸ್ಯೆಗಳನ್ನು ಉಲ್ಲೇಖಿಸಿದ ಅವರು, ಪರಿಸ್ಥಿತಿ ಪುನರಾವರ್ತನೆಯಾಗುವುದಿಲ್ಲ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಇಂತಹ ಪರಿಸ್ಥಿತಿ ಮತ್ತೆ ಉದ್ಭವಿಸದಂತೆ ನೋಡಿಕೊಳ್ಳಲು ನಾವು ಇಂದು ಎರಡೂ ಕಡೆಯ ನಾಯಕರನ್ನು ಒಟ್ಟುಗೂಡಿಸಿ ಚರ್ಚೆ ನಡೆಸಿದ್ದೇವೆ. ಎಲ್ಲವೂ ಬಗೆಹರಿಯುತ್ತದೆ ಎಂಬ ಸಂಪೂರ್ಣ ವಿಶ್ವಾಸ ನಮಗಿದೆ ಎಂದು ಅವರು ಹೇಳಿದರು.

### ಚಿರತೆ ದಾಳಿಗೆ ಕರು ಬಲಿ




**ಗುಂಡ್ಲುಪೇಟೆ:** ತಾಲೂಕಿನ ಕುಂದಕೆರೆ ಗ್ರಾಮದಲ್ಲಿ ಚಿರತೆ ದಾಳಿ ನಡೆಸಿ ಹಸುವಿನ ಕರುವನ್ನು ಬಲಿ ಪಡೆದಿದೆ. ಗ್ರಾಮದ ರವೀಶ್ ಎಂಬುವವರಿಗೆ ಸೇರಿದ ಕರು ಜಮೀನನಲ್ಲಿ ಮೇಯುತ್ತಿದ್ದ ವೇಳೆ ಚಿರತೆ ಹಠಾತ್ ದಾಳಿ ನಡೆಸಿದೆ. ಇದರಿಂದ ಸುತ್ತಲಿನ ಭೂಮಿ ಮಾಲೀಕರು ಭಯಭೀತರಾಗಿದ್ದಾರೆ.

ಬಂಡೀಪುರ ಅಭಯಾರಣ್ಯ ವ್ಯಾಪ್ತಿಯ ಕುಂದಕರೆ ವಲಯ ವ್ಯಾಪ್ತಿಯ ಕಾಡಂಚಿನ ಗ್ರಾಮಗಳಲ್ಲಿ ಹುಲಿ, ಚಿರತೆ ಕಾಟ

# ತಂಬಾಕು ಬೆಳೆಗಾರರಿಗೆ ನೆರವು

## ಕೇಂದ್ರ ಸಚಿವ ಪಿಯೂಷ್ ಗೋಯಲ್ ಭರವಸೆ

**ನವದೆಹಲಿ:** ಕರ್ನಾಟಕ ಸೇರಿದಂತೆ ದೇಶಾದ್ಯಂತ ತಂಬಾಕು ಬೆಳೆಗಾರರ ನೆರವಿಗೆ ಕೇಂದ್ರ ಸರ್ಕಾರ ಮುಂದಾಗಿದೆ. ಈ ಸಂಬಂಧ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಕೇಂದ್ರ ವಾಣಿಜ್ಯ ಸಚಿವ ಪಿಯೂಷ್ ಗೋಯಲ್ ಜೊತೆ ಮಾತು ಕತೆ ನಡೆಸಿದರು.



ಸಚಿವ ಗೋಯಲ್ ಅವರಿಗೆ ತಂಬಾಕು ಬೆಳೆಗಾರರ ಸಮಸ್ಯೆಗಳನ್ನು ಮನವರಿಕೆ ಮಾಡಿ ಕೊಡಲಾಯಿತು. ಎಲ್ಲ ಮನವಿಗಳನ್ನು ಸಚಿವರು ಆಲಿಸಿದರಲ್ಲದೆ, ಅವುಗಳನ್ನು ಕೂಡಲೇ ಪರಿಹರಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾದರು ಎಂದು ಎಚ್.ಡಿ.ಕುಮಾರಸ್ವಾಮಿ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಸೃಷ್ಟಿಯಾಗಿರುವ ಬಿಕ್ಕಟ್ಟಿನ ಶಮನಕ್ಕೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಸಚಿವ ಗೋಯಲ್ ಅವರು ತಮ್ಮ ಸಚಿವಾಲಯದ ಉನ್ನತ ಅಧಿಕಾರಿಗಳು ಹಾಗೂ ತಂಬಾಕು ಖರೀದಿಸುವ ಉದ್ಯಮದ ಪ್ರಮುಖರ ಜತೆ ಮಾತನಾಡಿ ಬೆಳೆಗಾರರ ನೆರವಿಗೆ ಬರುವಂತೆ ಸೂಚಿಸಿದರು ಎಂದು ಕುಮಾರಸ್ವಾಮಿ ಮಾಹಿತಿ ನೀಡಿದರು.

ಪುಟ 2ಕ್ಕೆ

# ಬೆಂಗಳೂರಿಗೆ ಒಡಿಶಾ ಕೈ ಶಾಸಕರು: 'ಟ್ರಬಲ್ ಶೂಟರ್' ಡಿಕೆಶಿಗೆ ನೇತೃತ್ವ

## ರಾಜ್ಯಸಭಾ ಚುನಾವಣೆಯಲ್ಲಿ ಅಡ್ಡ ಮತದಾನದ ಭೀತಿಯಲ್ಲಿ ಆಗಮನ

**ಬಿಡದಿ:** ಒಡಿಶಾದಲ್ಲಿ ನಡೆಯಲಿರುವ ರಾಜ್ಯಸಭಾ ಚುನಾವಣೆ ಹಿನ್ನೆಲೆಯಲ್ಲಿ ಅಡ್ಡ ಮತದಾನದ ಭೀತಿ ಹೆಚ್ಚಾಗಿರುವುದರಿಂದ ಅಲ್ಲಿನ ಕಾಂಗ್ರೆಸ್ ಶಾಸಕರನ್ನು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಗುರುವಾರ ರಾತ್ರಿ ಇಲ್ಲಿನ ವಂಡರ್ ಲಾ ರೆಸಾರ್ಟ್‌ಗೆ ಕರೆ ತರಲಾಗಿದೆ.

ಭುವನೇಶ್ವರದಿಂದ ಇಂಡಿಗೋ ವಿಮಾನದಲ್ಲಿ ಬೆಂಗಳೂರಿಗೆ ರಾತ್ರಿ 11 ಗಂಟೆಗೆ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದ ಶಾಸಕರನ್ನು ಡಿಕೆಶಿ ಸ್ವಾಗತಿಸಿದರು. ವಿಮಾನ ನಿಲ್ದಾಣದಿಂದ ಪೊಲೀಸ್ ಬಂದೋಬಸ್ತ್ ಮತ್ತು ಎಸ್ಕಾರ್ಟ್ ವ್ಯವಸ್ಥೆಯೊಂದಿಗೆ ಶಾಸಕರನ್ನು ನೇರವಾಗಿ ವಂಡರ್ ಲಾ ರೆಸಾರ್ಟ್‌ಗೆ ಕರೆತರಲಾಯಿತು. ಶಾಸಕರ ವಸತಿಗೆ ರೆಸಾರ್ಟ್‌ನಲ್ಲಿ ವಿಶೇಷ ವಸತಿ ವ್ಯವಸ್ಥೆ ಮಾಡಲಾಗಿದೆ.

ಈ ತಂಡದಲ್ಲಿ ಶಾಸಕರಾದ ಮಂಗು ಖಿಲಾ, ಅಪ್ಪಲ ಸ್ವಾಮಿ, ರಾಜನ್ ಎಕ್ಕಾ, ಅಶೋಕ್ ಕುಮಾರ್ ಸೇರಿದಂತೆ ಹಲವು ನಾಯಕರು ಇದ್ದಾರೆ. ಜೊತೆಗೆ ಮಾಜಿ ಸಂಸದ ಭಕ್ತ ಚರಣ್ ದಾಸ್ ಹಾಗೂ ಕಾಂಗ್ರೆಸ್ ವಕ್ತಾರ ದುರ್ಗಾ ಪ್ರಸಾದ್

ಪುಟ 2ಕ್ಕೆ



### ಇಲ್ಲಿಗೆ ನಾನು ಕರೆಸಿಲ್ಲ: ಡಿಕೆಶಿ

**ಬೆಂಗಳೂರು:** ಬೆಂಗಳೂರಿಗೆ ನಾನು ಒಡಿಶಾ ಶಾಸಕರನ್ನು ಕರೆಸಿಲ್ಲ. ಅವರೇ ಬಂದಿದ್ದಾರೆ. ಅಧಿವೇಶನ ಕಲಾಪ ಮುಗಿದ ಬಳಿಕ ಅವರನ್ನು ಭೇಟಿ ಮಾಡುತ್ತೇನೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.

ಮಾಧ್ಯಮಗಳ ಪ್ರಶ್ನೆಗಳಿಗೆ ಶುಕ್ರವಾರ ಪ್ರತಿಕ್ರಿಯೆ ನೀಡಿದ ಅವರು, ಆ ರಾಜ್ಯದ ನಮ್ಮ ಪಿಸಿಸಿ ಅಧ್ಯಕ್ಷರು ಕರೆ ಮಾಡಿ ನಮ್ಮ ಶಾಸಕರು ಬರುತ್ತಿದ್ದಾರೆಂದು ಹೇಳಿದರು. ಪಕ್ಷದ ವಿಚಾರ ಇರಬೇಕು. ನಾನೇ ಹೋಗಿ ಭೇಟಿ ಮಾಡುವೆ ಎಂದು ಹೇಳಿದ್ದೇನೆ.

ಪುಟ 2ಕ್ಕೆ




# 3 ವರ್ಷದಿಂದ ಯುಜಿಡಿ, ಕಸವಿಲೇವಾರಿ ಸಮಸ್ಯೆ

## ಸದನದಲ್ಲಿ ಕ್ಷೇತ್ರದ ಸಮಸ್ಯೆಗಳ ಬಿಚ್ಚಿಟ್ಟ ಶಾಸಕ ಜಿ ಟಿ ದೇವೇಗೌಡ

ಮೈಸೂರು: ಬಡಾವಣೆಗಳಲ್ಲಿ ನಿರ್ವಹಣೆ ಇಲ್ಲದ ಎಸ್ ಟಿ ಪಿಗಳಿಗೆ ಒಳಚರಂಡಿ ನೀರು ಸೇರಿ, ಕಾಲುವೆ, ಹಳ್ಳಗಳ ಮೂಲಕ ಹರಿದು ಹೋಗುತ್ತಿದ್ದು, ಸಾರ್ವಜನಿಕರಿಗೆ, ಜಾನುವಾರುಗಳಿಗೆ ತೊಂದರೆಯಾಗುತ್ತಿದೆ ಎಂದು ಶಾಸಕ ಜಿ ಟಿ ದೇವೇಗೌಡ ಸದನದಲ್ಲಿ ಪ್ರಶ್ನಿಸಿದರು.

ಚುಕ್ಕೆ ಗುರುತಿನ ಪ್ರಶ್ನೆ ಕೇಳಿದ ಅವರು, ಬಡಾವಣೆಗಳು ನಿರ್ಮಾಣಗೊಳ್ಳುವಾಗ ಬಡಾವಣೆಗಳಲ್ಲಿ ಒಳಚರಂಡಿ ಹಾಗೂ ಎಸ್.ಟಿ.ಪಿ.ಗಳು ನಿರ್ಮಾಣಗೊಂಡಿರುತ್ತವೆ. ಅವುಗಳ ನಿರ್ವಹಣೆ ಇಲ್ಲದೆ, ಹಸ್ತಾಂತರಗೊಂಡಿರುವ ಬಡಾವಣೆಗಳಲ್ಲಿ ಈಗಾಗಲೇ ಮನೆಗಳು ನಿರ್ಮಾಣಗೊಳ್ಳುತ್ತಿದ್ದು, ನಿರ್ವಹಣೆ ಇಲ್ಲದೆ ಇರುವ ಎಸ್.ಟಿ.ಪಿ.ಗೆ ಒಳಚರಂಡಿ ನೀರನ್ನು ಸಂಪರ್ಕಿಸಿದ್ದು, ಎಸ್.ಟಿ.ಪಿ.ಯಿಂದ ಒಳಚರಂಡಿ ನೀರು ಕಾಲುವೆ, ಹಳ್ಳಗಳ ಮೂಲಕ ಹರಿದು ಹೋಗುತ್ತಿದ್ದು, ಸರ್ಕಾರಕ್ಕೆ ಒಳಚರಂಡಿ ಅವ್ಯವಸ್ಥೆ ಬಗ್ಗೆ ಕಳೆದ 3 ವರ್ಷಗಳಿಂದ ಗಮನಕ್ಕೆ ತರುತ್ತಿದ್ದೇನೆ. ಮುಖ್ಯಮಂತ್ರಿ, ನಗರಾಭಿವೃದ್ಧಿ ಸಚಿವರ ಜೊತೆ ಕೆಡಿಪಿ ಸಭೆಯಲ್ಲೂ ಸಹ ಈ ವಿಚಾರವಾಗಿ ಬಹಳಷ್ಟು ಸಲ ಗಮನಕ್ಕೆ ತಂದಿದ್ದೇನೆ, ಖುದ್ದಾಗಿ ನಾನು, ಜಿಲ್ಲಾಧಿಕಾರಿ, ನಗರಪಾಲಿಕೆ ಆಯುಕ್ತ, ಅಧಿಕಾರಿಗಳ ಜೊತೆ ಸೇರಿ ಹಲವಾರು ಬಾರಿ ಸ್ಥಳ ಪರೀಕ್ಷೆ ಮಾಡಲಾಗಿದೆ. ಎಲ್ಲಾ ಖಾಸಗಿ ಬಡಾವಣೆಗಳ ಒಳಚರಂಡಿಯನ್ನು ಹೊಸದಾಗಿ ಒಂದು ಯೋಜನೆಯನ್ನು ಮಾಡಿ, ರಾಯನಕೆರೆ ಎಸ್.ಟಿ.ಪಿ.ಗೆ ಸಂಪರ್ಕಿಸಲು ಕ್ರಮ ಕೈಗೊಳ್ಳಬೇಕು ಎಂದು ಸಮಸ್ಯೆ ಬಗ್ಗೆ ಎಳೆ ಎಳೆಯಾಗಿ ವಿವರಿಸಿದರು.



ವಿಜಯನಗರ 2ನೇ ಹಂತದಿಂದ ಎ.ಡಿ.ಬಿ. ಲೈನ್ ಪ್ರಾರಂಭವಾಗಿ ಹಿನ್‌ಕಲ್, ವಿಜಯನಗರ 3ನೇ ಹಂತ, ಬೋಗಾದಿ 2ನೇ ಹಂತ, ಶಾರದದೇವಿನಗರ, ಆನಂದನಗರ, ಕಾರ್ತಿಕ ಬಡಾವಣೆ, ದಟ್ಟಗಳ್ಳಿ ಮೂಲಕ ಲಿಂಗಾಬೂದಿಕೆರೆ, ಪ್ರೀತಿ ಲೇಔಟ್, ಅರಸು ಲೇಔಟ್ ಮೂಲಕ ರಾಯನಕೆರೆ ಎಸ್.ಟಿ.ಪಿ.ಗೆ ಬಂದು ಸೇರುತ್ತದೆ. ಆದರೆ, ಕೆಲ ಖಾಸಗಿ ಬಡಾವಣೆಗಳು ಒಳಚರಂಡಿ ನೀರನ್ನು ನೇರವಾಗಿ ಎ.ಡಿ.ಬಿ. ಲೈನ್‌ಗೆ ಸಂಪರ್ಕಿಸಿದ್ದು, ಇದರಿಂದ ಒಳಚರಂಡಿ ನೀರು ರಾಯನಕೆರೆ ಎಸ್.ಟಿ.ಪಿ.ಗೆ ಹೋಗದೆ ಹಳ್ಳದ ಮೂಲಕ ಎಣ್ಣೆಹೊಳೆ ಸೇರುತ್ತಿದೆ, ಇದರಿಂದ ಸಾರ್ವಜನಿಕರಿಗೆ ಬಹಳ ತೊಂದರೆಯಾಗುತ್ತಿದೆ, ಅದೇ ರೀತಿಯಾಗಿ ಮರಟಿಕ್ಯಾತನಹಳ್ಳಿ, ದಾಸನಕೊಪ್ಪಲು ಎಸ್.ಬಿ.ಎಂ. ಬಡಾವಣೆಯ ಒಳಚರಂಡಿ ನೀರನ್ನು ಎ.ಡಿ.ಬಿ. ಲೈನ್‌ಗೆ ಸಂಪರ್ಕಿಸುವ ಕಾಮಗಾರಿ ಪೂರ್ಣಗೊಳ್ಳದೆ, ಕೇರ್ಗಳ್ಳಿ ಹತ್ತಿರ ಒಳಚರಂಡಿ ನೀರು ಅಯ್ಯಜಯನಕೆರೆಗೆ ಸೇರಿ ಕಲುಷಿತಗೊಳ್ಳುತ್ತಿದೆ.

ಆದ್ದರಿಂದ ತುರ್ತಾಗಿ ಎ.ಡಿ.ಬಿ. ಲೈನ್‌ಗೆ ಒಳಚರಂಡಿ ನೀರನ್ನು ಸಂಪರ್ಕಿಸಲು ಕ್ರಮ ಕೈಗೊಳ್ಳಬೇಕೆಂದು ಸರ್ಕಾರದಲ್ಲಿ ಮನವಿ ಮಾಡಿದರು..

ಕಳೆದ ಬಾರಿ ಮಳೆ ಬಂದಾಗ ಮನೆಗೆ ನೀರಿನ ಜೊತೆಗೆ ಹಾವುಗಳು ಸೇರಿತ್ತು. ಇದರಿಂದ ಭಯಭೀತರಾಗಿ ಮನೆಯ ಮೇಲತ್ತಿ ಸುರಕ್ಷಿತ ಸ್ಥಳಕ್ಕೆ ತೆರಳಿದರು, ನಂತರ ಮನೆಯನ್ನು ಖಾಲಿ ಮಾಡಿಕೊಂಡು ಹೋದರು, ಇಂತಹ ಪರಿಸ್ಥಿತಿ ಮೈಸೂರು ನಗರ ಹಾಗೂ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ನಿರ್ಮಾಣವಾಗಿದೆ ಎಂದು ಯು ಜಿ ಡಿ ಸಮಸ್ಯೆ ಬಗ್ಗೆ ವಿವರಿಸಿದರು.

ಸ್ಥಳೀಯ ಸಂಸ್ಥೆಗಳಲ್ಲಿ ಅನುದಾನ ಇಲ್ಲದೆ ಇರುವುದರಿಂದ, ಜಿಲ್ಲಾಡಳಿತ ಸರ್ಕಾರಕ್ಕೆ 1500 ಕೋಟಿ ಅನುದಾನಕ್ಕಾಗಿ ಮನವಿ ಸಲ್ಲಿಸಲಾಗಿದೆ, ಸರ್ಕಾರ 800 ಕೋಟಿ, 1000 ಕೋಟಿ ಎಷ್ಟಾದರೂ ಕೊಡಲಿ, ಇಲ್ಲವೇ ಎಂಡಿಎ ಕಾಯ್ದೆ ಜಾರಿಗೆ ಬಂದಿದ್ದು ಎಂಡಿಎ ಮುಖಾಂತರವಾದರೂ ಸರಿ ಬಡಾವಣೆಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸಬೇಕು. ನೀವು ಎರಡನೇ ಮುಖ್ಯಮಂತ್ರಿ ಇದ್ದಂತೆ, ನೀವು ಹೇಳಿದರೆ ಮುಖ್ಯಮಂತ್ರಿ ಕೇಳುತ್ತಾರೆ ಆದ್ದರಿಂದ ತುರ್ತಾಗಿ ಯು ಜಿ ಡಿ, ಕಸ ವಿಲೇವಾರಿ ಘಟಕ ಹಾಗೂ ಮೂಲಭೂತ ಸೌಕರ್ಯಗಳನ್ನು ತುರ್ತಾಗಿ ಕಲ್ಪಿಸುವಂತೆ ಮನವಿ ಮಾಡಿದರು.

### ಸಚಿವ ಭೈರತಿ ಸುರೇಶ್ ಭರವಸೆ

**ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಮಾತನಾಡಿ, ಮೈಸೂರು ನಗರಕ್ಕೆ ಕುಡಿಯುವ ನೀರು, ಯುಜಿಡಿ, ಮೂಲಭೂತ ಸೌಕರ್ಯ ಕ್ಕಾಗಿ 1500 ಸಾವಿರ ಕೋಟಿ ಅನುದಾನಕ್ಕಾಗಿ ಮನವಿ ಮಾಡಲಾಗಿತ್ತು. ಮುಖ್ಯಮಂತ್ರಿಗಳು ಈ ಬಾರಿ ಬಜೆಟ್ ನಲ್ಲಿ ಮೈಸೂರು ನಗರದಲ್ಲಿ ಕುಡಿಯುವ ನೀರು,ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಲು 800 ಕೋಟಿ ರೂಪಾಯಿ ವಿಶೇಷ ಅನುದಾನ ನೀಡಿದ್ದು, ಮೊದಲ ಆದ್ಯತೆಯಾಗಿ ಚಾಮುಂಡೇಶ್ವರಿ ವಿಧಾನ ಸಭಾ ಕ್ಷೇತ್ರದ ಯುಜಿಡಿ ಸಮಸ್ಯೆ ಬಗೆಹರಿಸಲು ಹಾಗೂ ಬಡಾವಣೆಗಳಿಗೆ ಮೂಲಸೌಕರ್ಯ ಒದಗಿಸುವುದಕ್ಕೆ ಬೇಕಾದ ಕ್ರಮಕೈಗೊಳ್ಳುವ ಭರವಸೆ ಶೀಘ್ರದಲ್ಲೇ ಸಮಸ್ಯೆಗೆ ಪರಿಹಾರ ಕಲ್ಪಿಸಲಾಗುವುದು. ಹೊಸ ಲೇಔಟ್‌ಗಳನ್ನು ಗುರುತಿಸಿ ಅದಕ್ಕೆ ಬೇಕಾದ ಸೌಕರ್ಯಕ್ಕೆ ಗಮನಹರಿಸಲಾಗುವುದು ಎಂದು ಭರವಸೆ ನೀಡಿದರು. ರೂ 27 ಒಳಚರಂಡಿ ಮಿಸಿಂಗ್ ಲಿಂಕ್ ಗಳಿಗೆ ಹಾಗೂ ಒಳಚರಂಡಿ ಸಂಪರ್ಕಿಸುವ ಸಲುವಾಗಿ ರೂ 27 ಕೋಟಿ ಅನುದಾನವನ್ನು ಪ್ರಸ್ತಾವನೆ ಸಲ್ಲಿಸಿರುವುದಾಗಿ ಶಾಸಕರು ತಿಳಿಸಿದಾಗ ಸಚಿವರು ಕೂಡಲೆ ಸರ್ಕಾರದಿಂದ ಅನುದಾನ ಬಿಡುಗಡೆ ಮಾಡಲಾಗುವುದು ಎಂದು ತಿಳಿಸಿದರು.**

# ಸಿಲಿಂಡರ್ ಅಭಾವ: ಬೀದಿಯಲ್ಲೇ ಸೌದೆ ಒಲೆ ಹಚ್ಚಿದ ವಾಟಾಳ್



ಮೈಸೂರು: ಯುದ್ಧದ ಹಿನ್ನೆಲೆಯಲ್ಲಿ ದೇಶಾದ್ಯಂತ ಸಿಲಿಂಡರ್ ಅಭಾವದ ಹಿನ್ನೆಲೆಯಲ್ಲಿ ಯುದ್ಧನಿಲ್ಲಿಸುವಂತೆ ಹಾಗೂ ಸಮರ್ಪಕ ಅನಿಲ ಪೂರೈಕೆಗೆ ಒತ್ತಾಯಿಸಿ ನಗರದ ರಸ್ತೆಯಲ್ಲೇ ಸೌದೆ ಒಲೆ ಹಚ್ಚಿ ವಾಟಾಳ್ ನಾಗರಾಜ್ ಪ್ರತಿಭಟಿಸಿದ ಘಟನೆ ನಡೆಯಿತು.

ನಗರದ ಜಯಚಾಮರಾಜೇಂದ್ರ ವೃತ್ತದಲ್ಲಿ ಕನ್ನಡ ಚಳವಳಿ ಸಮಿತಿ ನೇತೃತ್ವದಲ್ಲಿ ಪ್ರತಿಭಟಿಸಿದ ಅವರು, ಎಲ್‌ಪಿಜಿ ಸಿಲಿಂಡರ್ ಕೊರತೆ ವಿರುದ್ಧ ಸೌದೆ ಒಲೆಯಲ್ಲಿ ನೀರು ಕಾಯಿಸುವ ಮೂಲಕ ಪ್ರತಿಭಟನೆ ನಡೆಸಿದರು. ಬಳಿಕ ಮಾತನಾಡಿ, ಸದ್ಯ ಬಹಳ ಗಂಭೀರವಾದ ಪರಿಸ್ಥಿತಿಯಲ್ಲಿ ಯುದ್ಧ ಬೇಕಾಗಿಲ್ಲ. ಅಮೇರಿಕಾದವರಿಗೆ ಜೀವನಪರ್ಯಂತ ಯುದ್ಧ ಬೇಕು. ಇಸ್ರೇಲ್ ಯಹೂದಿ ಗಳಿಗೆ ಯುದ್ಧ ಬೇಕು. ಪ್ರಪಂಚದ ಸಾಮಾನ್ಯ ಜನರ ಮೇಲೆ ಇದರ ಪರಿಣಾಮ ಬೀರಿದೆ. ಪೆಟ್ರೋಲ್ , ಗ್ಯಾಸ್ , ಔಷಧೀಯ ಕೊರತೆಯಿಂದ ಪ್ರಪಂಚದ ಕಣ್ಣೀರು ಇಡುತ್ತಿದೆ. ಟ್ರಂಪ್ ಗೆ ಇದು ಆಟವಾಗಿದೆ. ಇರಾನ್ ಮುಖ್ಯಸ್ಥರನ್ನು ಕೊಂದಿದ್ದೀರಿ. ಅಮೇರಿಕಾ ಮೊದಲಿಂದಲೂ ಸಾಮ್ರಾಜ್ಯಶಾಹಿ.ನಮ್ಮನ್ನು ಬಿಟ್ಟರೆ ಯಾರೂ ಇಲ್ಲ ಎನ್ನುತ್ತಾರೆ. ಮಹಾತ್ಮ ಗಾಂಧಿ ಯವರ ತತ್ವ ಸಿದ್ಧಾಂತಕ್ಕೆ ಬದ್ದರಾಗಬೇಕು. ಪ್ರಪಂಚದ ಮಾತನ್ನು ಅಮೇರಿಕಾ ಕೇಳಬೇಕು. ಕೇಳದಿದ್ದರೆ ಅಮೇರಿಕಾ ವಿರುದ್ಧ ಯುದ್ಧಕ್ಕೆ ಪ್ರಪಂಚ ಇಳಿಯಬೇಕಾಗುತ್ತದೆ ಎಂದರು.

ಟ್ರಂಪ್ ಸರಿ ಇಲ್ಲ, ಅಧ್ಯಕ್ಷರಾಗಿ ಈ ಮಟ್ಟಕ್ಕೆ ಇಳಿಯಬಾರದು. ಟ್ರಂಪ್ ಗೆ ಕಳಕಳಿಯ ಮನವಿಯನ್ನು ಮಾಡುತ್ತೇನೆ. ಯುದ್ಧ ನಿಲ್ಲಿಸಿ. ಅಮೇರಿಕಾ ಬಹಿರಂಗ ಕ್ಷಮೆ ಕೇಳಬೇಕು. ಪ್ರಧಾನ ಮಂತ್ರಿ ಮೋದಿ ಬೇರೆ ದೇಶದಲ್ಲಿ ಒಳ್ಳೆಯ ಹೆಸರನ್ನು ತೆಗೆದುಕೊಂಡಿದ್ದಾರೆ. ಪ್ರಧಾನಿ ಹಾಗೂ ವಿರೋಧ ಪಕ್ಷದ ನಾಯಕರು ಯುದ್ಧ ನಿಲ್ಲಲಿ ಎಂದು ಟ್ರಂಪ್ ಬೇಟಿ ಮಾಡಿದರೆ ಒಳ್ಳೆಯದು. ನರೇಂದ್ರ ಮೋದಿ, ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಎಲ್ಲರೂ ಯುದ್ಧ ನಿಲ್ಲಿಸಬೇಕು ಅಂತ ಟ್ರಂಪ್ ಗೆ ಹೇಳಲಿ. ಅನಿವಾರ್ಯ ಬಿದ್ದರೆ ನಾವು ಕರ್ನಾಟಕ ಬಂದ್ ಗೆ ಕರೆ ಕೊಡುತ್ತೇವೆ ಎಂದರು. ಪ್ರತಿಭಟನೆಯಲ್ಲಿ ಕನ್ನಡ ಚಳವಳಿ ಹೋರಾಟಗಾರ ಮೂಗೂರು ನಂಜುಂಡಸ್ವಾಮಿ, ಕರ್ನಾಟಕ ಸೇನಾಪಡೆ ಅಧ್ಯಕ್ಷ ತೇಜೇಸ್ ಲೋಕೇಶ್ ಗೌಡ ಇನ್ನಿತರರು ಉಪಸ್ಥಿತರಿದ್ದರು.

ಮೊದಲ ಪುಟದಿಂದ

## ಭಕ್ತಿ ಇಲ್ಲದ ಪೂಜೆ ಸಾರ್ಥಕವಲ್ಲ

ದ್ವಾರ ಪೂಜಾ ಮಹೋತ್ಸವದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಶುದ್ಧವಾದ ಭಕ್ತಿ ಇರಬೇಕು. ಶುದ್ಧವಾದ ಭಕ್ತಿ ಇಲ್ಲದೇ ಎಷ್ಟೇ ಪೂಜೆ, ದರ್ಶನ ಮಾಡಿದರೂ ಅದು ಸಾರ್ಥಕ ಆಗುವುದಿಲ್ಲ. ದೇವರಿದ್ದಾನೆ. ದೇವರಲ್ಲಿ ಭಕ್ತಿ ಇರಬೇಕು. ಮಾನವೀಯತೆಯಿಂದ ಕೂಡಿರುವುದು, ನಿಷ್ಕಲ್ಮಶವಾದುದು, ಯಾರನ್ನೂ ದ್ವೇಷಿಸದೇ ಇರುವುದೇ ನಿಜವಾದ ಭಕ್ತಿ. ಬೇರೆಯವರಿಗೂ ಒಳಿತನ್ನೇ ಬಯಸಬೇಕು. ನಮ್ಮೊಂದಿಗೆ ಇತರರಿಗೂ ಒಳ್ಳೆಯದಾಗಲಿ ಎಂದೇ ಪ್ರಾರ್ಥಿಸಬೇಕು ಎಂದು ಅವರು ಹೇಳಿದರು.ದೇವರು ಗುಡಿಯಲ್ಲಷ್ಟೇ ಇರುತ್ತಾನೆ ಎಂಬ ನಂಬಿಕೆ ಸರಿಯಾದುದಲ್ಲ. ದೇವರು ಎಲ್ಲ ಕಡೆಯೂ ಇದ್ದಾನೆ. ಪ್ರತಿ ಕ್ಷಣವೂ ದೇವರು ಗಮನಿಸುತ್ತಾನೆ. ನಾವು ಮಾಡುವ ಕೆಲಸವನ್ನು ಪ್ರತಿ ಕ್ಷಣವೂ ನೋಡುತ್ತಲೇ ಇರುತ್ತಾನೆ ಎಂದು ಹೇಳಿದರು.

ಈಗಿನ ಹುಂಡಿಗಳಿಗೂ ಆಗಿನ ಹುಂಡಿಗಳಿಗೂ ಬಹಳಷ್ಟು ವ್ಯತ್ಯಾಸ ಇದೆ. ಎಲ್ಲ ಹುಂಡಿಗಳ ಜನರೂ ನನ್ನನ್ನು ಹಿಂದಿನಿಂದಲೂ ಬೆಂಬಲಿಸುತ್ತಾ ಬಂದಿದ್ದೀರಿ. ಎಲ್ಲ ಧರ್ಮಗಳೂ ಪ್ರೀತಿಯನ್ನೇ ಬೋಧಿಸುತ್ತವೆ. ಯಾವ ಧರ್ಮವೂ ಯಾರನ್ನೂ ದ್ವೇಷಿಸುವಂತೆ ಹೇಳಿಲ್ಲ ಎಂದರು.

ಜನರ ಆಶೀರ್ವಾದದಿಂದ 1978ರಲ್ಲಿ ಈ ಪ್ರದೇಶದಿಂದಲೇ ನನ್ನ ರಾಜಕೀಯ ಜೀವನ ಪ್ರಾರಂಭವಾಯಿತು. ಅಪಾರ ಜನಬೆಂಬಲ ಇಲ್ಲಿ ಸಿಕ್ಕಿದೆ. ಚಾಮುಂಡೇಶ್ವರಿ ಮತ್ತು ವರುಣ ಕ್ಷೇತ್ರದ ಜನರು ನನ್ನನ್ನು ಬೆಂಬಲಿಸುತ್ತಲೇ ಬಂದಿದ್ದಾರೆ. ಇಲ್ಲಿನ ಜನರ ಆಶೀರ್ವಾದದಿಂದ ಮುಖ್ಯಮಂತ್ರಿಯಾಗಿ 17 ಬಾರಿ ಬಜೆಟ್‌ಗಳನ್ನು ಮಂಡಿಸುವ ಅವಕಾಶ ದೊರೆತಿದೆ. ನಾನು 13 ಚುನಾವಣೆಗಳನ್ನು ಎದುರಿಸಿದ್ದೇನೆ. ನಾಲ್ಕು ಬಾರಿ ಸೋತ ಸಂದರ್ಭದಲ್ಲೂ ಈ ಭಾಗದ ಜನರು ನನ್ನನ್ನೇ ಬೆಂಬಲಿಸಿದ್ದಾರೆ. ನನ್ನ ರಾಜಕೀಯ ಬದುಕಿಗೆ ಇಲ್ಲಿನ ಜನರ ಕೊಡುಗೆ ಅನನ್ಯವಾಗಿದೆ ಎಂದು ಭಾವುಕರಾಗಿ ಮಾತನಾಡಿದರು. ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, ಈ ದೇವಸ್ಥಾನಕ್ಕೆ ಮೂಲಸೌಕರ್ಯವನ್ನು ಸರ್ಕಾರದಿಂದ ಮಾಡಿಕೊಡಲಾಗಿದೆ. ದಾನಿಗಳು, ಭಕ್ತರು ಹಾಗೂ ಎಲ್ಲರ ಸಹಕಾರದಿಂದ ಭವ್ಯವಾದ ದೇವಸ್ಥಾನ ನಿರ್ಮಾಣವಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು. ಕಾಗಿನೆಲೆ ಕನಕ ಗುರುಪೀಠದ ಕೆ.ಆರ್. ನಗರ ಶಾಖೆಯ ಶಿವಾನಂದಪುರಿ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಮಾಜಿ ಶಾಸಕ ಎಂ. ಕೆ.ಸೋಮಶೇಖರ್, ಕಾಂಗ್ರೆಸ್ ಗ್ರಾಮಾಂತರ ಜಿಲ್ಲಾ ಸಮಿತಿಯ ಅಧ್ಯಕ್ಷ ಬಿ.ಜೆ. ವಿಜಯ್‌ಕುಮಾರ್ ಇತರರು ಭಾಗವಹಿಸಿದ್ದರು.

## 4–5 ಸಾವಿರ ಮಂದಿಗೆ ಪ್ರಸಾದ

**ವ್ಯವಸ್ಥೆ ಬಳಸುತ್ತಿರುವುದರಿಂದ ಅನ್ನ ಸಂತರ್ಪಣೆಗೆ ಯಾವುದೇ ಸಮಸ್ಯೆ ಬಂದಿಲ್ಲ. ಗವಿಸಿದ್ದೇಶ್ವರ ವಸತಿ ನಿಲಯದಲ್ಲಿ ಸುಮಾರು 400ಕ್ಕೂ ಹೆಚ್ಚು ವಿದ್ಯಾರ್ಥಿಗಳು ವಾಸವಾಗಿದ್ದಾರೆ. ಅವರಿಗೆ ಪ್ರತಿದಿನ ಮೂರು ಹೊತ್ತು ಊಟ ತಯಾರಿಸಲಾಗುತ್ತದೆ. ಜೊತೆಗೆ ಗವಿಮಠದಲ್ಲಿ ನಡೆಯುವ ನಿತ್ಯ ದಾಸೋಹದಲ್ಲಿ ನಿತ್ಯ ಸುಮಾರು 4ರಿಂದ 5 ಸಾವಿರ ಜನರಿಗೆ ಅನ್ನಸಂತರ್ಪಣೆ ಮಾಡಲಾಗುತ್ತದೆ. ಇದುವರೆಗೆ ಪ್ರಸಾದ ವಿತರಣೆಗೆ ಯಾವುದೇ ಸಮಸ್ಯೆ ಆಗಿಲ್ಲ.**

## 30 ಸಾವಿರ ಭಕ್ತರಿಗೆ ಅಡುಗೆ

ಹಾಗೂ ಸಾಂಬಾರು ತಯಾರಿ ಮಾಡಲು ಸೌದೆ ಒಲೆಯನ್ನು ಸ್ಟೀಮ್ ಆಗಿ ಪರಿವರ್ತಿಸಿ ಬಳಸಿಕೊಳ್ಳಲಾಗುತ್ತದೆ. ಮಠದಲ್ಲಿ ಸೌರಶಕ್ತಿಯನ್ನೂ ಬಳಸಿಕೊಳ್ಳಲಾಗುತ್ತದೆ. ಸಂಜೆಯ ವೇಳೆ ಒಂದು ಹೊತ್ತು ಅಡುಗೆ ತಯಾರಿಸಲು ಅದನ್ನು ಬಳಸಿಕೊಳ್ಳಲಾಗುತ್ತದೆ ಎಂದು ಸಿದ್ದಲಿಂಗ ಸ್ವಾಮೀಜಿ ವಿವರಿಸಿದರು. ಸಾಂಬಾರು ಹಾಗೂ ಚಪಾತಿ ಮಾಡಲು ಸೌದೆ ಹೊಟ್ಟನ್ನು ಕೂಡ ಬಳಸಿಕೊಳ್ಳುತ್ತೇವೆ. ಸೌದೆ ಬಳಸುವ ಮುನ್ನ ರೈಸ್ ಮಿಲ್ ಗಳಲ್ಲಿ ದೊರೆಯುವ ಭತ್ತದ ಹೊಟ್ಟನ್ನು ಬಳಸುತ್ತಿದ್ದೆವು. ಆದರೆ ಪ್ರಸ್ತುತ ನಗರದಲ್ಲಿ ರೈಸ್ ಮಿಲ್ ಸಂಖ್ಯೆ ಕಡಿಮೆ ಇರುವುದರಿಂದ ಭತ್ತದ ಹೊಟ್ಟನ್ನು ಬಳಸುತ್ತಿಲ್ಲ. ಪ್ರಸ್ತುತ ಮಠದ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಅಡಿಕೆ ಸಿಪ್ಪೆಯನ್ನು ಸಂಗ್ರಹಿಸಿ ತರುತ್ತಾರೆ. ಅದನ್ನು ಒಣಗಿಸಿ ನಂತರ ಉರುವಲಾಗಿ ಬಳಸಿಕೊಳ್ಳಲಾಗುತ್ತಿದೆ ಎಂದರು.

# ಲೀಟರ್ ಹಾಲಿಗೆ 1 ರೂ. ಬೋನಸ್

## ಹಾಲು ಉತ್ಪಾದಕರ ಜತೆಗೆ ಸಿಬ್ಬಂದಿ, ಗುತ್ತಿಗೆ ಕಾರ್ಮಿಕರಿಗೂ ಉಡುಗೊರೆ

## ನಷ್ಟದಲ್ಲಿದ್ದ ಬಮೂಲ್‌ಗೆ ಈ ವರ್ಷ 60 ಕೋಟಿ ರೂ. ಲಾಭ

**ಬಮೂಲ್ ಅಧ್ಯಕ್ಷ ಡಿ.ಕೆ.ಸುರೇಶ್ ಹೇಳಿಕೆ**



ರಾಮನಗರ: ಪ್ರತಿ ಲೀಟರ್‌ಗೆ 1 ರೂನಂತೆ ಹಾಲು ಉತ್ಪಾದಕರಿಗೆ ಹೆಚ್ಚುವರಿಯಾಗಿ ನೀಡುವುದಾಗಿ ಬಮೂಲ್ ಅಧ್ಯಕ್ಷ ಡಿ.ಕೆ.ಸುರೇಶ್ ಹೇಳಿದರು.

ಈ ಸಂಬಂಧ ಬೆಂಗಳೂರಿನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ಬಮೂಲ್ ಈಗ ಲಾಭದತ್ತ ನಡೆದಿದೆ.

ನಮ್ಮಲ್ಲಿ 1,27,644 ಹಾಲು ಉತ್ಪಾದಕರಿದ್ದು, ಅವರು ಈ ವರ್ಷ 59,39,78,492 ಲೀಟರ್ ಹಾಲು ನೀಡಿದ್ದಾರೆ. ನಮ್ಮ ಒಕ್ಕೂಟದ ಇತಿಹಾಸದಲ್ಲಿ ಮೊದಲನೆ ಬಾರಿಗೆ ನಾವು ಅವರಿಗೆ ಪ್ರತಿ ಲೀಟರ್ ಗೆ 1 ರೂ. ನಂತೆ 59,39,78,492 ರೂ. ಅನ್ನು ಹೆಚ್ಚುವರಿಯಾಗಿ ನೀಡಲು ತೀರ್ಮಾನಿಸಿದ್ದೇವೆ. ಯುಗಾದಿ ಹಬ್ಬದ ಕೊಡುಗೆಯಾಗಿ ನಮ್ಮ ಆಡಳಿತ ಮಂಡಳಿ ಈ ನಿರ್ಧಾರ ಮಾಡಿದ್ದು, ಮಾ.31 ಅಥವಾ ಏ.10ರ ಒಳಗಾಗಿ ಅವರ ಖಾತೆಗೆ ಹಣ ಜಮೆ ಮಾಡಲಾಗುವುದು ಎಂದು ತಿಳಿಸಿದರು. ನಾವು ಕಾರ್ಮಿಕರಿಗೆ ಬಾಕಿ ಇದ್ದ 4.68 ಕೋಟಿ ಡಿಎ ಅನ್ನು ನೀಡಲು ತೀರ್ಮಾನಿಸಿದ್ದೇವೆ. 3 ವರ್ಷದಿಂದ ಖಾಯಂ ಆಗದ ಸಿಬ್ಬಂದಿಗಳನ್ನು ಖಾಯಂ ಮಾಡಿದ್ದೇವೆ. ಗುತ್ತಿಗೆ ಕಾರ್ಮಿಕರಿಗೆ ತಲಾ 5 ಸಾವಿರ ಬೋನಸ್ ನೀಡಲು ತೀರ್ಮಾನಿಸಿದ್ದೇವೆ. 2300 ಪ್ರಾಥಮಿಕ ಹಾಲು ಒಕ್ಕೂಟಗಳಿಗೆ ನಿರ್ವಹಣೆಗೆ ಪ್ರತಿ ಲೀಟರ್ ಗೆ 1.40 ರೂ. ನೀಡುತ್ತಿದ್ದು, ಈ ಬಾರಿ ನಮ್ಮ ನಿರ್ದೇಶದ ಮನವಿ ಮೇರೆಗೆ ಪ್ರತಿ ಸಂಘಗಳಿಗೆ 15 ಸಾವಿರದಂತೆ 3.45 ಕೋಟಿ ರೂ.ಗಳನ್ನು ನೀಡಲಾಗುವುದು ಎಂದರು.

### ನಷ್ಟದಲ್ಲಿದ್ದ ಬಮೂಲ್ ಈಗ ಲಾಭದಲ್ಲಿ

2025–26ನೇ ಸಾಲಿನಲ್ಲಿ ಬಮೂಲ್ 3400 ಕೋಟಿ ರೂ. ವಹಿವಾಟು ಮಾಡಿದ್ದು, 14.50 ಕೋಟಿ ನಷ್ಟದಲ್ಲಿದ್ದ ಸಂಸ್ಥೆಯು ಈ ವರ್ಷ 60 ಕೋಟಿ ಲಾಭ ಕಂಡಿದೆ. ಕಳೆದ ಸಾಲಿನಲ್ಲಿ ನಮ್ಮ ಒಕ್ಕೂದಿಂದ 2900 ಕೋಟಿ ವಹಿವಾಟು ಕಂಡಿತ್ತು ಎಂದರು. ಕ್ಷೀರ ಕ್ಷೇತ್ರದಲ್ಲಿ ರೈತರು ಬೆಳಗ್ಗೆ ಹಾಗೂ ರಾತ್ರಿ ಎದ್ದು ಸೂಕ್ಷ್ಮ ಪ್ರಾಣಿ ಹಸುವನ್ನು ಸಾಕಬೇಕು. ಈ ರೈತರಿಗೆ ಶಕ್ತಿ ನೀಡಬೇಕು ಎಂಬುದು ನಮ್ಮ ಉದ್ದೇಶ. ಇಂದು ಕೆಎಂಎಫ್ ಹಾಗೂ ನಂದಿನಿ ಮೂಲಕ ಸಾಕಷ್ಟು ಬೆಳವಣಿಗೆ ಕಂಡಿದ್ದು, ಈಗ ಖಾಸಗಿ ಸಂಸ್ಥೆಗಳು ನಗರ ಪ್ರದೇಶಗಳಲ್ಲಿ ಲಗ್ಗೆ ಹಾಕಿವೆ. ಇಂದು ಸಾಮಾಜಿಕ ಜಾಲತಾಣ ಕೂಡ ಪ್ರಭಾವ ಬೀರಿದೆ. ಗ್ರಾಹಕರಿಗೆ ಗುಣಮಟ್ಟದ ಹಾಲು, ಉತ್ಪನ್ನ ನೀಡುವುದು, ಕಾರ್ಮಿಕರಿಗೆ ನ್ಯಾಯ ಒದಗಿಸುವ ಉದ್ದೇಶದಿಂದ ಬೆಂಗಳೂರು ಹಾಲು ಒಕ್ಕೂಟ ಕೆಲಸ ಮಾಡುತ್ತಿದೆ ಎಂದರು.

### ಸೋರಿಕೆ ತಡೆಗಟ್ಟಿ, ಮಾರುಕಟ್ಟೆ ಸುಧಾರಣೆ ಕ್ರಮ

**ನಷ್ಟದಲ್ಲಿರುವ ಒಕ್ಕೂಟವನ್ನು ಲಾಭಕ್ಕೆ ತರಲು ಏನೆಲ್ಲಾ ಸುಧಾರಣೆ ತಂದಿದ್ದೀರಿ ಎಂದು ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಮಾರುಕಟ್ಟೆಯಲ್ಲಿ ಸೋರಿಕೆ ತಡೆಗಟ್ಟಿದ್ದೇವೆ. ಸಾಗಾಣಿಕಾ ವೆಚ್ಚ ಕಡಿಮೆ ಮಾಡಿದ್ದೇವೆ, ರೈತರ ಹಾಲಿನ ಗುಣಮಟ್ಟ ಹೆಚ್ಚಳ ಮಾಡಿದ್ದೇವೆ. ನಮ್ಮ ಚೀಸ್, ಪನೀರ್, ವೇ ಪೌಡರ್ ಉತ್ಪಾದನೆ ಮಾಡುತ್ತಿದ್ದೇವೆ. ಚಿಕ್ಕಬಳ್ಳಾಪುರದವರಿಗೆ 1.50 ಲಕ್ಷ ಲೀಟರ್ ಕೋ ಪ್ಯಾಕಿಂಗ್ ಮಾಡುತ್ತಿದ್ದೇವೆ. ದೆಹಲಿಯಲ್ಲಿ ಮದರ್ ಡೈರಿ ಅವರಿಗೆ 2 ಲಕ್ಷ ಲೀಟರ್ ಮಾಡುತ್ತಿದ್ದೇವೆ. ಕನಕಪುರದಲ್ಲಿರುವ ಮೆಗಾ ಡೈರಿ 14 ಲಕ್ಷ ಲೀಟರ್ ಹಾಲು ಸಂಸ್ಕರಣಾ ಸಾಮರ್ಥ್ಯ ಹೊಂದಿದ್ದು, ಮಂಡ್ಯ ಹಾಲು ಒಕ್ಕೂಟದಿಂದ 5 ಲಕ್ಷ ಹೆಚ್ಚುವರಿ ಹಾಲು ನೀಡಿ ಎಂದು ಕೆಎಂಎಫ್ ಅವರನ್ನೇ ಕೇಳಿದ್ದೆ. ಕನಕಪುರ ಡೈರಿಯಲ್ಲಿ 8 ವರ್ಷಗಳಿಂದ ಯಾವತ್ತೂ ನಾವು 14 ಲಕ್ಷ ಹಾಲು ಸಂಸ್ಕರಣೆ ಮಾಡಿಲ್ಲ. ಕಳೆದ ವರ್ಷದ ವರೆಗೂ ಅಲ್ಲಿ ಸರಾಸರಿ 4.50 ಲಕ್ಷ ಲೀಟರ್ ಸಂಸ್ಕರಣೆ ಮಾಡಲಾಗಿತ್ತು. ಈ ವರ್ಷ 10–11 ಲಕ್ಷ ಲೀಟರ್ ಹಾಲು ಸಂಸ್ಕರಣೆ ಮಾಡಿದ್ದು, ಈಗ ಸರಾಸರಿ 8.50 ಲಕ್ಷ ಲೀಟರ್ ಸಂಸ್ಕರಣೆ ಮಾಡಲಾಗುತ್ತಿದೆ. ನಮ್ಮ ಒಟ್ಟಾರೆ ವೆಚ್ಚ ತಗ್ಗುವಂತಾಗಿದೆ. ದುಂದುವೆಚ್ಚ ಕಡಿಮೆ ಮಾಡಲಾಗಿದೆ. ಸಿಬ್ಬಂದಿ, ಮಾರುಕಟ್ಟೆ ಸುಧಾರಣೆ ಮಾಡಲಾಗಿದೆ. ಸ್ಪರ್ಧೆಯಿಂದ ರೈತರಿಗೆ ತೊಂದರೆಯಾಗದಂತೆ ನೋಡಿಕೊಳ್ಳಲಾಗುವುದು. ಇನ್ನು ಹೆಚ್ಚಿನ ಬದಲಾವಣೆ ತರುವ ಸಾಧ್ಯತೆಗಳಿವೆ ಎಂದು ತಿಳಿಸಿದರು.**

ನಮ್ಮ ನಾಯಕರು ನನಗೆ ಈ ಹಾಲು ಒಕ್ಕೂಟದ ಜವಾಬ್ದಾರಿ ನೀಡಿದ್ದಾರೆ. ಕಳೆದ 8 ತಿಂಗಳಿನಿಂದ ಈ ಒಕ್ಕೂಡದ ಜವಾಬ್ದಾರಿ ಹೊತ್ತು ಕೆಲಸ ಮಾಡುತ್ತಿದ್ದೇನೆ. ಪ್ರತಿನಿತ್ಯ ರಾಜ್ಯದಲ್ಲಿ 1 ಕೋಟಿ ಲೀಟರ್ ಹಾಲು ಉತ್ಪಾದನೆ ಮಾಡಲಾಗುತ್ತಿದ್ದು, ನಮ್ಮ ಒಕ್ಕೂಟದಿಂದ 16–18 ಲಕ್ಷ ಲೀಟರ್ ಹಾಲು ಶೇಖರಿಸುತ್ತಿದ್ದೇವೆ. ನಮಗೂ ಬೇರೆ ಖಾಸಗಿಯವರಿಗೆ ಇರುವ ವ್ಯತ್ಯಾಸ ಎಂದರೆ ನಾವು 24 ತಾಸಿನೊಳಗೆ ಗ್ರಾಹಕರ ಮನೆ ಬಾಗಿಲಿಗೆ ಹಾಲು ಪೂರೈಸುವ ಕೆಲಸ ಮಾಡುತ್ತಿದ್ದೇವೆ. ಬೇರೆಯವರು ಬ್ರ್ಯಾಂಡಿಗ್ ಮಾಡಿಕೊಂಡು ಮಾರುಕಟ್ಟೆ ಮಾಡುತ್ತಿದ್ದಾರೆ ಎಂದರು

### ಎ2 ಮಿಲ್ಕ್ ತುಪ್ಪಕ್ಕೆ ಸುಧಾರಾಣಿ ರಾಯಭಾರಿ

**ಶೀಘ್ರವೇ ಉತ್ಪನ್ನ ಮಾರುಕಟ್ಟೆಗೆ**



ನಟಿ ಸುಧಾರಾಣಿ ಅವರನ್ನು ರಾಯಭಾರಿಯಾಗಿ ಮಾಡಿಕೊಂಡಿದ್ದು ವಿವಾದವಾಗಿರುವ ಬಗ್ಗೆ ಕೇಳಿದಾಗ, ದೇಸಿ ಹಾಲು (ಎ2 ಮಿಲ್ಕ್) ಉತ್ಪನ್ನ ವನ್ನು ಕೇವಲ ನಮ್ಮ ಒಕ್ಕೂಟದಿಂದ ಮಾತ್ರ ಪರಿಚಯಿಸಲಾಗುತ್ತಿದ್ದು, ಅದಕ್ಕೆ ರಾಯಭಾರಿ ಯನ್ನಾಗಿ ನಾವು ಸುಧಾರಾಣಿ ಅವರ ಜತೆ ಮಾತನಾಡಿದ್ದೇವೆ. ನಮ್ಮ ಒಕ್ಕೂಟದ ಕೆಳಗೆ ನಮ್ಮ ಆಡಳಿತ ಮಂಡಳಿ ತೀರ್ಮಾನ ಮಾಡಿದೆ. ಂ2 ತುಪ್ಪವನ್ನು ಶೀಘ್ರದಲ್ಲೇ ಮಾರುಕಟ್ಟೆಗೆ ಬಿಡುಗಡೆ ಮಾಡುತ್ತೇವೆ ಎಂದರು.

### ಕೆಲವು ಉತ್ಪನ್ನಗಳಲ್ಲಿ ನಷ್ಟವೂ ಇದೆ

**ನಮ್ಮ ಒಕ್ಕೂಟದಲ್ಲಿ ಸಂಗ್ರಹಿಸುವ ಹಾಲಿನಲ್ಲಿ 65% ಅನ್ನು ಮಾತ್ರ ಮಾರಾಟ ಮಾಡಿದ್ದು, ಉಳಿದ ಹಾಲನ್ನು ಉತ್ಪನ್ನಗಳ ಮೂಲಕ ಮಾರಾಟ ಮಾಡಲಾಗುತ್ತಿದೆ. ಬೇರೆಯವರ ಜತೆ ಸ್ಪರ್ಧೆಗಾಗಿ ತಂದಿರುವ ವಿವಿಧ ಹಾಲುಗಳಾದ ಟೋನ್ಡ್ ಮಿಲ್ಕ್, ಸಮೃದ್ಧಿ, ಶುಭಂ ಹಾಲುಗಳಲ್ಲಿ 1 ರೂ, 20 ಪೈಸೆ, 2 ರೂ. ನಷ್ಟು ನಷ್ಟವಿದೆ. ಹೊಟೇಲ್ ಗಳಿಗೆ ಮಾರುವ 6 ಲೀಟರ್ ಪ್ಯಾಕೆಟ್ ಮೂಲಕ ಪ್ರತಿ ಲೀಟರ್ ಗೆ 1.60 ರೂ. ನಷ್ಟವಾಗುತ್ತದೆ. ಇದನ್ನು ನಾವು ಸರ್ಕಾರಕ್ಕೆ ಹೇಳಿದರೆ, ಸರ್ಕಾರವೂ ಒಪ್ಪಲ್ಲ, ನೀವು ಒಪ್ಪುವ ಸ್ಥಿತಿಯಲ್ಲಿ ಇಲ್ಲ. ಆದರೂ ಇದು ರೈತರ ಸಂಸ್ಥೆಯಾಗಿರುವುದರಿಂದ ರೈತರಿಗೆ ಗೌರವ ಉಳಿಸುವ ಕೆಲಸ ಮಾಡಿಕೊಂಡು ಬರುತ್ತಿದ್ದೇವೆ ಎಂದರು.**




ಮೊದಲ ಪುಟದಿಂದ

## ಸಚಿವರಿಗೆ ಸಿಎಂ ಆಹ್ವಾನ

ಸಿಎಂ ಸಿದ್ದರಾಮಯ್ಯ ಮಾರ್ಚ್ 16 ರಂದು ಸಚಿವರಿಗೆ ಔತಣಕೂಟ ಏರ್ಪಡಿಸಿರುವ ವಿಚಾರ ಕುರಿತು ಪ್ರತಿಕ್ರಿಯೆ ನೀಡಿದ ಅವರು, ಈಗ ಡಿನ್ನರ್ ಪಾರ್ಟಿಗೆ 16 ಸಚಿವರನ್ನ ಮಾತ್ರ ಕರೆದಿದ್ದಾರೆ. ನನ್ನನ್ನೂ ಕರೆದಿದ್ದಾರೆ. ಇನ್ನೂ ಬೇರೆಯವರನ್ನು ಕರೆಯುತ್ತಾರೋ ಇಲ್ಲವೋ ಗೊತ್ತಿಲ್ಲ ಎಂದರು. ಹಿರಿಯ ಶಾಸಕರ ಸಭೆ ವಿಚಾರ ಕುರಿತು ಪ್ರತಿಕ್ರಿಯಿಸಿದ ಸಚಿವ ರಾಮಲಿಂಗರೆಡ್ಡಿ, ಮಂತ್ರಿಗಳಾಗಬೇಕೆಂದು ಅವರಿಗೂ ಆಸೆ ಇರುತ್ತದೆ. 2.5 ವರ್ಷ ಆದ ಮೇಲೆ ಸಚಿವ ಸ್ಥಾನ ಸಿಗಬಹುದು ಅಂದುಕೊಂಡಿದ್ದರು ಮೂರ್ನಾಲ್ಕು ತಿಂಗಳು ವಿಳಂಬ ಆಗಿದೆಯಲ್ಲ. ಅದಕ್ಕೆ ಸಭೆ ಕರೆದಿದ್ದಾರೆ. ಸಂಪುಟ ಪುನರಾಚನೆ ಪಕ್ಷದ ಹೈಕಮಾಂಡ್ ಗೆ ಬಿಟ್ಟ ವಿಚಾರ ಎಂದು ಹೇಳಿದರು.

## ಚಿರತೆ ದಾಳಿಗೆ ಕರು ಬಲಿ

ಹೆಚ್ಚಾಗಿದೆ. ಜಾನುವಾರು, ಮೇಕೆಗಳ ಮೇಲೆ ದಾಳಿ ನಡೆಸಿ ಕೊಂದು ಹಾಕುತ್ತಿದೆ. ಇದರಿಂದ ರೈತರು ರೋಸಿ ಹೋಗಿದ್ದಾರೆ. ಕೂಡಲೇ ಚಿರತೆ ಸೆರೆ ಹಿಡಿಯುವ ಜೊತೆಗೆ ನಷ್ಟ ಅನುಭವಿಸಿದ ರೈತನಿಗೆ ಸೂಕ್ತ ಪರಿಹಾರ ದೊರಕಿಸಿ ಕೊಡಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

## ಬೆಂಗಳೂರಿಗೆ ಒಡಿಶಾ ಕೈ ಶಾಸಕರು: 'ಟ್ರಬಲ್ ಶೂಟರ್' ಡಿಕೆಶಿಗೆ ನೇತೃತ್ವ

ಪಾಂಡಾ ಸೇರಿ ಒಟ್ಟು ಸುಮಾರು 14 ಮಂದಿ ಬೆಂಗಳೂರಿಗೆ ಬಂದಿದ್ದಾರೆ.

147 ಸದಸ್ಯ ಬಲದ ಒಡಿಶಾ ವಿಧಾನಸಭೆಯಲ್ಲಿ ಬಿಜೆಡಿ 50 ಸ್ಥಾನಗಳನ್ನು ಹೊಂದಿದೆ. ಕಾಂಗ್ರೆಸ್ ನ 14 ಶಾಸಕರಿದ್ದಾರೆ. ಬಿಜೆಡಿ ಅಧಿಕೃತ ಅಭ್ಯರ್ಥಿಯಾಗಿ ಡಾ. ಸ್ಯಾಂಟ್ರಪ್ಟ್ ಮಿಶ್ರಾ ಅವರನ್ನು ನಾಮನಿರ್ದೇಶನ ಮಾಡಿದೆ. ನಾಲ್ಕನೇ ರಾಜ್ಯಸಭಾ ಸ್ಥಾನಕ್ಕೆ ಡಾ. ದತ್ತೇಶ್ವರ್ ಹೋಟಾ ಅವರನ್ನು ಸಾಮಾನ್ಯ ಅಭ್ಯರ್ಥಿಯಾಗಿ ಕಣಕ್ಕಿಳಿಸಿದೆ. ಕಾಂಗ್ರೆಸ್ ಅವರ ಉಮೇದುವಾರಿಕೆಗೆ ಬೆಂಬಲ ನೀಡಿದೆ. ಮತ್ತೊಂದೆಡೆ, ಆಡಳಿತಾರೂಢ ಬಿಜೆಪಿ 79 ಶಾಸಕರ ಬೆಂಬಲ ಹೊಂದಿದೆ. ಇಬ್ಬರು ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ. ಜೊತೆಗೆ ಸ್ವತಂತ್ರ ಅಭ್ಯರ್ಥಿ ದಿಲೀಪ್ ರೇ ಅವರಿಗೆ ಸಹ ಬೆಂಬಲ ನೀಡಿದೆ.

ಚುನಾವಣೆಯಲ್ಲಿ ಒಬ್ಬ ಅಭ್ಯರ್ಥಿ ಗೆಲ್ಲಲು ಕನಿಷ್ಠ 30 ಪ್ರಥಮ ಪ್ರಾಶಸ್ತ್ಯದ ಮತಗಳು ಅಗತ್ಯವಿದೆ. ಬಿಜೆಡಿ ತನ್ನ ಅಧಿಕೃತ ಅಭ್ಯರ್ಥಿ ಡಾ. ಸಂತ್ರಪ್ಟ್ ಮಿಶ್ರಾ ಗೆಲುವನ್ನು ಖಚಿತಪಡಿಸಿಕೊಳ್ಳಲು ಅನುಕೂಲಕರ ಸ್ಥಾನದಲ್ಲಿದೆ. ಆದರೂ, ಡಾ. ದತ್ತೇಶ್ವರ್ ಹೋಟಾ ಗೆಲುವು ಕಾಂಗ್ರೆಸ್ ಶಾಸಕರ ಬೆಂಬಲವನ್ನು ಅವಲಂಬಿಸಿರುತ್ತದೆ.

ಬಿಜೆಪಿ ಬೆಂಬಲಿಸಿರುವ ಸ್ವತಂತ್ರ ಅಭ್ಯರ್ಥಿ ದಿಲೀಪ್ ರೇ, ಎದುರಾಳಿಗಳಿಂದ ಕನಿಷ್ಠ 8 ಶಾಸಕರ ಬೆಂಬಲವನ್ನು ಪಡೆದರೆ ಮಾತ್ರ ಗೆಲುವು ಸಾಧಿಸಬಹುದು. ಇದು ಸ್ಪರ್ಧೆಯಲ್ಲಿ ಅಡ್ಡ ಮತದಾನವನ್ನು ನಿರ್ಣಾಯಕ ಅಂಶವಾಗಿಸುತ್ತದೆ. ಈ ಹಿನ್ನೆಲೆಯಲ್ಲಿ ಕಾಂಗ್ರೆಸ್ ತನ್ನ ಶಾಸಕರನ್ನು ಒಟ್ಟಿಗೆ ಇರಿಸಿ ಪಕ್ಷದ ನಿರ್ಧಾರಕ್ಕೆ ಬದ್ಧರಾಗುವಂತೆ ಮಾಡಲು ಬೆಂಗಳೂರಿಗೆ ಕರೆಸಿಕೊಂಡಿದೆ. ಶಾಸಕರ ಉಸ್ತುವಾರಿ ನೇತೃತ್ವವನ್ನು ಡಿಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ ವಹಿಸಿದೆ ಎಂದು ತಿಳಿದುಬಂದಿದೆ.

## 16ರಂದು ಸಿಎಂ 'ಡಿನ್ನರ್ ಪಾರ್ಟಿ'

ಅಧಿವೇಶನ ನಡೆಯುತ್ತಿರುವ ಸಂದರ್ಭದಲ್ಲೇ ಕಾಂಗ್ರೆಸ್ ಪಕ್ಷದ ಒಳರಾಜಕೀಯ ಚಟುವಟಿಕೆಗಳು ಚುರುಕುಗೊಂಡಿದೆ.

ಮುಂದಿನ ರಾಜಕೀಯ ತಂತ್ರಗಳ ಕುರಿತು ಡಿನ್ನರ್ ಸಭೆಯಲ್ಲಿ ಚರ್ಚೆಯಾಗುವ ಸಾಧ್ಯತೆ ಇದೆ. ವಿಶೇಷವಾಗಿ ಸ್ಥಳೀಯ ಸಂಸ್ಥೆಗಳ ಚುನಾವಣೆ, ಜಿಬಿಎ ಚುನಾವಣೆಗಳ ತಯಾರಿ ಹಾಗೂ ಒಳಮೀಸಲಾತಿ ಸೇರಿದಂತೆ ಹಲವು ಪ್ರಮುಖ ವಿಷಯಗಳ ಬಗ್ಗೆ ಚರ್ಚೆಯಾಗಬಹುದು ಎಂದು ಮೂಲಗಳು ತಿಳಿಸಿವೆ. ಕೆಪಿಸಿಸಿ ಅಧ್ಯಕ್ಷರಾಗಿ ಆರು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಡಿಸಿಎಂ ಡಿಕೆ ಶಿವಕುಮಾರ್ ಅವರು ಕೂಡ ಸಚಿವರು ಮತ್ತು ಶಾಸಕರಿಗಾಗಿ ಡಿನ್ನರ್ ಮೀಟಿಂಗ್ ಆಯೋಜಿಸಿದ್ದರು. ಈ ಬೆನ್ನಲ್ಲೇ ಮಾರ್ಚ್ 12ರಂದು ಸಿಎಂ ಮತ್ತು ಡಿಸಿಎಂ ಬಣಗಳಿಗೆ ಸೇರಿರುವ ಕೆಲವು ಶಾಸಕರು ಪ್ರತ್ಯೇಕವಾಗಿ ಸಭೆ ನಡೆಸಿದ್ದು ರಾಜಕೀಯ ವಲಯದಲ್ಲಿ ಚರ್ಚೆಗೆ ಕಾರಣವಾಗಿದೆ.

## ಇಲ್ಲಿಗೆ ನಾನು ಕರೆಸಿಲ್ಲ:

ಹೀಗಾಗಿ ಅವರಿಗೆ ಉಳಿಯುವ ವ್ಯವಸ್ಥೆ ಮಾಡಿದ್ದೇವೆ ಎಂದು ಹೇಳಿದರು.

ರಾಜ್ಯ ಸಭೆ ಚುನಾವಣೆಯಲ್ಲಿ ಅಡ್ಡಮತದಾನವಾಗದಂತೆ ತಡೆಯಲು ನಿಮಗೆ ಪಕ್ಷ ಟಾಸ್ಕ್ ನಿಡಿದೆಯೇ ಎಂದು ಕೇಳಿದಾಗ, ಪಕ್ಷ ಹೇಳಿದ್ದನ್ನು ಮಾಡಬೇಕು. ಎಲ್ಲಾ ರಾಜ್ಯಗಳಲ್ಲೂ ಈ ರೀತಿ ನಡೆಯುತ್ತಿರುತ್ತದೆ. ಇದು ಹೊಸತೇನಲ್ಲ. ನನ್ನ ಭೇಟಿಗೆ ಸಮಯ ಕೇಳಿದರು. ನಾನು ಅಧಿವೇಶನ ನಡೆಯುತ್ತಿದೆ. ಇಲ್ಲಿಗೆ ಬರಬೇಡಿ ಕಲಾಪ ಮುಗಿಸಿಕೊಂಡು ನಾನೇ ಬರುತ್ತೇನೆ ಎಂದು ಹೇಳಿರುವೆ ಎಂದು ಹೇಳಿದರು.

## ತಂಬಾಕು ಬೆಳೆಗಾರರಿಗೆ ನೆರವು

ಸಭೆ ನಂತರ ದೆಹಲಿಯ ಕರ್ನಾಟಕ ಭವನದಲ್ಲಿ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ ಮಾಜಿ ಸಚಿವ ಸಾ.ರಾ. ಮಹೇಶ್ ಅವರು, ಸೋಮವಾರದಿಂದ ತಂಬಾಕು ಖರೀದಿಗೆ ಸಚಿವ ಪಿಯೂಷ್ ಗೋಯಲ್ ಅವರು ಸೂಚನೆ ನೀಡಿದ್ದಾರೆ ಎಂದು ಹೇಳಿದರು.


190 ದೇಶಗಳ ರಾಯಭಾರಿಗಳಿಗೆ ಪತ್ರ ಬರೆದು ಮುಕ್ತ ಮಾರುಕಟ್ಟೆಯಲ್ಲಿ ತಂಬಾಕು ಖರೀದಿಗೆ ಕೋರಿಕೆ ಸಲ್ಲಿಸಲಾಗುವುದು. ಅಲ್ಲದೆ, ಈವರೆಗೆ ರಫ್ತು ಮಾಡದಿರುವ ದೇಶಗಳಿಗೂ ತಂಬಾಕು ರಫ್ತು ಮಾಡುವ ಬಗ್ಗೆ ಕ್ರಮ ವಹಿಸಲಾಗುವುದು ಎಂದು ಕೇಂದ್ರ ವಾಣಿಜ್ಯ ಸಚಿವರು ಭರವಸೆ ನೀಡಿದ್ದಾರೆ ಎಂದು ತಿಳಿಸಿದರು.

ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಮೈಸೂರು–ಕೊಡಗು ಸಂಸದ ಯದುವೀರ್ ಒಡೆಯರ್, ಸಂಸದ ಮಲ್ಲೇಶ್ ಬಾಬು, ಶಾಸಕರಾದ ಎ. ಮಂಜು, ಜಿ.ಡಿ.ಹರೀಶ್ ಗೌಡ, ಸಿ.ಎನ್. ಮಂಜೇಗೌಡ, ಮಾಜಿ ಶಾಸಕರಾದ ಮಹದೇವು, ಅಶ್ವಿನ್ ಕುಮಾರ್ ಭಾಗಿಯಾಗಿದ್ದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

# ಸರಳ ಪ್ರಕ್ರಿಯೆ
# ಸುಲಭ ಸೇವೆ

## ಅಲೆದಾಟ,
## ಕಾಲ ವಿಳಂಬವಿಲ್ಲದೆ
## ಜನರ ಮನೆ ಬಾಗಿಲಿಗೆ
## ಆಡಳಿತ ಸೇವೆಗಳು





- ಕಂದಾಯ ಗ್ರಾಮ ಯೋಜನೆಯಡಿ ದಾಖಲೆರಹಿತ ಜನವಸತಿಗಳಿಗೆ **1,11,111 ಹಕ್ಕುಪತ್ರಗಳ ವಿತರಣೆ**
- "ಪೋಡಿಮುಕ್ತ ಗ್ರಾಮ" ಅಭಿಯಾನದಡಿ 3,126 ಗ್ರಾಮಗಳ **91,200 ಅರ್ಜಿಗಳ ವಿಲೇವಾರಿ** ಮತ್ತು ಏಕವ್ಯಕ್ತಿ ಪಹಣಿಗಳ ಸೃಜನೆ
- ರಾಜ್ಯದ **30,662 ಗ್ರಾಮ ನಕಾಶೆ** ಮತ್ತು ಹಿಸ್ಸಾ ದಾಖಲೆಗಳಿಗೆ ಡಿಜಿಟೈಸ್ ಹಾಗೂ ಜಿಯೊ ರೆಫರೆನ್ಸ್ ವ್ಯವಸ್ಥೆ
- ಮೋಜಿಣಿ ತಂತ್ರಾಂಶದ ಮೂಲಕ **10.89 ಲಕ್ಷ ಜಮೀನುಗಳ** ಅಳತೆ ಕಾರ್ಯ ಪೂರ್ಣ

**ನಮ್ಮ ಸರ್ಕಾರವು ತಂತ್ರಜ್ಞಾನದ ಗರಿಷ್ಠ ಬಳಕೆಗೆ ಒತ್ತು ನೀಡಿ ಕಂದಾಯ ಆಡಳಿತವನ್ನು ಜನಸ್ನೇಹಿ ಹಾಗೂ ಪಾರದರ್ಶಕವಾಗಿಸುವಲ್ಲಿ ಯಶಸ್ಸು ಕಂಡಿದೆ.**

## ಕರ್ನಾಟಕ ನವ ನಿರ್ಮಾಣಕ್ಕೆ
# ಗ್ಯಾರಂಟಿ ಸರ್ಕಾರ...

ವೈಜ್ಞಾನಿಕ ಮನೋಧರ್ಮ ಬೆಳೆಸಿಕೊಳ್ಳುವುದು; ಪ್ರಶ್ನೆ ಮಾಡುವ ಮತ್ತು ಬದಲಾವಣೆಗೆ ಒಡ್ಡಿಕೊಳ್ಳುವ ಮನಃಸ್ಥಿತಿ ಬೆಳೆಸಿಕೊಳ್ಳುವುದು.- ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

CMofKarnataka https://dipr.karnataka.gov.in/

ಕರ್ನಾಟಕ ವಾರ್ತೆ

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಹಿಂದುಳಿದ ವರ್ಗ / ಬ್ರಾಹ್ಮಣ ಸಮುದಾಯಗಳ ಮಾಲೀಕತ್ವ ಮತ್ತು ಸಂಪಾದಕತ್ವದ ಪತ್ರಿಕೆಗಳಿಗೆ ಪ್ರೋತ್ಸಾಹ ರೂಪದ ಜಾಹೀರಾತು

# ಕಾನೂನು ಸುವ್ಯವಸ್ಥೆ ಸಂಪೂರ್ಣ ಕುಸಿತ

**ಮಾಜಿ ಶಾಸಕ ನಿರಂಜನ್ ಕುಮಾರ್ ಆಕ್ರೋಶ**

ಗುಂಡ್ಲುಪೇಟೆ: ತಾಲೂಕಿನಲ್ಲಿ ಗಾಂಜಾ ಹಾವಳಿ ಮಿತಿಮೀರಿದ್ದು, ಆಡಳಿತ ವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ. ಕೊಲೆ, ದರೋಡೆ ಮತ್ತು ಕಳ್ಳತನಗಳು ಎಗ್ಗಿಲ್ಲದೆ ನಡೆಯುತ್ತಿದ್ದರೂ ಪೊಲೀಸ್ ಇಲಾಖೆ ಮೌನಕ್ಕೆ ಶರಣಾಗಿದೆ, ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಹಾಗೂ ಮಾಜಿ ಶಾಸಕ ಸಿ. ಎಸ್.ನಿರಂಜನಕುಮಾರ್ ಕಿಡಿಕಾರಿದ್ದಾರೆ.



ತಾಲೂಕಿನ ಪ್ರಸಕ್ತ ವಿದ್ಯಮಾನಗಳ ಕುರಿತು ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು. ಗಾಂಜಾ ಮಾಫಿಯಾ ಮತ್ತು ಸರಣಿ ಕೊಲೆಗಳ ಆತಂಕ ಯುವ ಸಮೂಹ ಗಾಂಜಾ ದಾಸರಾಗುತ್ತಿದ್ದು, ಇದರಿಂದ ಅಪರಾಧ ಪ್ರಕರಣಗಳು ಹೆಚ್ಚುತ್ತಿವೆ. ಮೂಖಹಳ್ಳಿ ಗ್ರಾಮದ ಯುವಕ ನಂಜುಂಡಸ್ವಾಮಿಯ ಕೊಲೆಗೆ ಗಾಂಜಾ ಸೇವಿಸಿದವರೇ ಕಾರಣ ಎಂಬ ಅನುಮಾನವಿದೆ. ಈ ಹಿಂದೆ ಪಟ್ಟಣದಲ್ಲಿ ನಡೆದ ಶಿವು ಕೊಲೆ ಕೂಡ ಗಾಂಜಾ ಪ್ರಭಾವದಿಂದಲೇ ನಡೆದಿತ್ತು. ಗಡಿ ಭಾಗದಲ್ಲಿ ಗಾಂಜಾ ಮಾರಾಟ ಅವ್ಯಾಹತವಾಗಿ ನಡೆಯುತ್ತಿದ್ದರೂ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಪತ್ರಿಕಾ ಹೇಳಿಕೆಯಲ್ಲಿ ದೂರಿದರು.

ದೇವಸ್ಥಾನಗಳ ಮೇಲೆ ಖದೀಮರ ಕಣ್ಣು ಬಿದ್ದಿದ್ದು ಬನ್ನಿತಾಳಪುರದ ಆರು ದೇವಸ್ಥಾನಗಳು, ಭೀಮನಬೀಡು ಬಾಣಂತಿ ಮಾರಮ್ಮ ಹಾಗೂ ಇಂದು ಬರಗಿ ಗ್ರಾಮದ ಬಸವೇಶ್ವರ ದೇವಸ್ಥಾನದ ಬೀಗ ಮುರಿದು ಲಕ್ಷಾಂತರ ರೂಪಾಯಿ ಬೆಲೆಬಾಳುವ ಬೆಳ್ಳಿ ವಿಗ್ರಹ, ಚಿನ್ನದ ಆಭರಣಗಳನ್ನು ಕಳ್ಳತನ ಮಾಡಲಾಗಿದೆ. ಆದರೆ, ಈವರೆಗೂ ಪೊಲೀಸರು ಒಬ್ಬನೇ ಒಬ್ಬ ಆರೋಪಿಯನ್ನು ಬಂಧಿಸಲು ಸಾಧ್ಯವಾಗಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

### ಸರ್ಕಾರದ ವೈಫಲ್ಯಗಳ ಕಾರಣ

ಅಕ್ರಮ ದಂಧೆ, ಅಕ್ರಮ ಲಾಟರಿ, ಮದ್ಯ ಮಾರಾಟ ಹಾಗೂ ಪಡಿತರ ಅಕ್ಕಿ ದಂಧೆ ಜೋರಾಗಿದೆ. ಬೇಗೂರಿನಲ್ಲಿ ಅಕ್ಕಿ ವಶಪಡಿಸಿಕೊಂಡಿರುವುದೇ ಇದಕ್ಕೆ ಸಾಕ್ಷಿ. ಮತ್ತೆ ಆರೋಗ್ಯ ಸೇವೆಯಂತೂ ಕುಸಿತ ಕಂಡಿದ್ದು ತಾಲೂಕು ಆಸ್ಪತ್ರೆ, ಕಬ್ಬಹಳ್ಳಿ ಮತ್ತು ಬೇಗೂರು ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆಯಿದೆ. ಆಂಬುಲೆನ್ಸ್ ಸಮಸ್ಯೆ ಇದ್ದರೂ ಕೂಡ ಒಂದೇ ಒಂದನ್ನು ತರಲು ಸಾಧ್ಯವಾಗಿಲ್ಲ ಹಾಗೂ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಬಸ್ ಸೌಲಭ್ಯವಿಲ್ಲದೆ ಪರದಾಡುವಂತಾಗಿದೆ ಶಾಸಕರ ವಿರುದ್ಧ ಕಿಡಿಕಾರಿದ್ದಾರೆ.

# ರಸ್ತೆಯಲ್ಲೇ ಹರಿದ ಚರಂಡಿ ನೀರು



ಗುಂಡ್ಲುಪೇಟೆ: ತಾಲ್ಲೂಕಿನ ಬರಗಿ ಗ್ರಾಮದಲ್ಲಿ ಚರಂಡಿ ತುಂಬಿ ರಸ್ತೆಯ ಮೇಲೆ ಚರಂಡಿ ಕೊಳಕು ನೀರು ಹರಿಯುತಿದ್ದರೂ ಪಕ್ಕದಲ್ಲೇ ಗ್ರಾ.ಪಂ ಕಾರ್ಯಾಲಯಾ ವಿದ್ದರೂ ಚರಂಡಿ ನೀರು ಸರಾಗವಾಗಿ ಹರಿಯುವ ಸಣ್ಣ ಕೆಲಸವನ್ನೂ ಮಾಡಿಸದ ಗ್ರಾ.ಪಂ ಅಭಿವೃದ್ಧಿ ಅಧಿಕಾರಿ ಯಾವುದೇ ಅಭಿವೃದ್ಧಿ ಕಾರ್ಯ ಮಾಡುತ್ತಿಲ್ಲ ಎಂದು ಗ್ರಾಮದ ಮಹೇಶ್ ಆರೋಪಿಸಿದ್ದಾರೆ.

ಬರಗಿ, ಹೊಂಗಹಳ್ಳಿ,ನಾಗಪಟ್ಟಣ, ಮುಕ್ತಿ ಕಾಲೋನಿ, ಮುಂಟೀಪುರ ಗ್ರಾಮಗಳು ಬರಗಿ ಗ್ರಾ.ಪಂ ವ್ಯಾಪ್ತಿಗೆ ಬರುತ್ತದೆ ಬರಗಿಯಿಂದ ನಾಗಪಟ್ಟಣಕ್ಕೆ, ಬರಗಿ ಫಾರಂ ಕಡೆ ತೆರಳುವ ರಸ್ತೆಯ ಮೇಲೆ ಕೊಳಚೆ ನೀರು ಹರಿಯುತಿದ್ದು ಜಮೀನಿಗೆ ತೆರಳುವ ರೈತರು, ಕೂಲಿ ಕಾರ್ಮಿಕರು ಕೊಳಚೆ ನೀರು ತುಳಿದು ಓಡಾಡುವ ಪರಿಸ್ಥಿತಿ ಇದ್ದು ದುರ್ವಾಸನೆ ಗೆ ಮೂಗು ಮುಚ್ಚಿ ದಿನ ತಿರುಗಾಡುವ ದುಸ್ಥಿತಿ ಎದುರಾಗಿದೆ. ಗ್ರಾ.ಪಂ ಯಿಂದ ನೂರು ಮೀಟರ್ ಅಂತರದಲ್ಲಿ ಇಂತಹ ಸಮಸ್ಯೆ ಬಗೆಹರಿಸದ ಅಭಿವೃದ್ಧಿ ಅಧಿಕಾರಿ ಸುತ್ತಮುತ್ತಲಿನ ಗ್ರಾಮಗಳ ಸಮಸ್ಯೆ ಬಗೆಹರಿಸಲು ಸಾಧ್ಯವೇ, ಜಿ.ಪಂ ಸಿಇಓ ಹಾಗೂ ಇಓ ಏನು ಮಾಡುತಿದ್ದಾರೆ ಗ್ರಾ.ಪಂ ಗಳಿಗೆ ಭೇಟಿ ನೀಡಿ ಸಾರ್ವಜನಿಕರ ಸಮಸ್ಯೆ ಗ್ರಾ.ಪಂ ಅಧಿಕಾರಿಗಳು ನೌಕರರ ಆಡಳಿತ ವೈಖರಿ ಬಗ್ಗೆ ಪರಿಶೀಲಿಸಬೇಕು ಎಂದು ಗ್ರಾಮಸ್ಥ ಮಹೇಶ್ ಒತ್ತಾಯಿಸಿದ್ದಾರೆ. ರಸ್ತೆ ಬದಿಯಲ್ಲಿ ಸಣ್ಣ ಕಾಲುವೆ ತೋಡಿ ಮುಂದೆ ಇಂಗು ಗುಂಡಿಯ ರೀತಿ ಮಾಡಿದರೆ ರಸ್ತೆಗೆ ಚರಂಡಿ ನೀರು ಹರಿಯುವುದು ಕೆಇಮೆಯಾಗುತ್ತದೆ ಆದರೂ ಇಂತ ಸಷ್ಣ ಕೆಲಸವನ್ನು ಗ್ರಾ.ಪಂ ಯವರು ಮಾಡಲಿಲ್ಲ ಎಂದರೆ ಎಂತಹ ದುರ್ದೈವ ಎಂದು ಆರೋಪಿಸಿದರು.

# ಮಡಿವಾಳರ ಹೋರಾಟದಲ್ಲಿ ಪಾಲ್ಗೊಳ್ಳಿ



ಮೈಸೂರು: ಮಡಿವಾಳ ಸಮುದಾಯವನ್ನು ಪರಿಶಿಷ್ಟ ಜಾತಿಗೆ ಸೇರಿಸಬೇಕೆಂದು ಆಗ್ರಹಿಸಿ ರಾಜ್ಯ ಸಂಘ ಮಾ. 16 ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಹಮ್ಮಿಕೊಂಡಿರುವ ಅಹೋರಾತ್ರಿ ಧರಣಿಯಲ್ಲಿ ಜಿಲ್ಲೆಯ ಸಮುದಾಯದ ಎಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ಜಿಲ್ಲಾ ಮಡಿವಾಳರ ಪರಿಶಿಷ್ಟ ಜಾತಿ ಹೋರಾಟ ಸಮಿತಿ ಅಧ್ಯಕ್ಷ ಎಸ್.ಜೆ. ಪ್ರಶಾಂತ್ ಮನವಿ ಮಾಡಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ದೇಶದ 18 ರಾಜ್ಯಗಳಲ್ಲಿ ಹಾಗೂ ಐದು ಕೇಂದ್ರಾಡಳಿತ ಪ್ರದೇಶಗಳಲ್ಲಿ ಈಗಾಗಲೇ ಮಡಿವಾಳರನ್ನು ಪರಿಶಿಷ್ಟ ಜಾತಿಯಲ್ಲಿ ಗುರುತಿಸಲಾಗಿದೆ. ಆದರೆ ರಾಜ್ಯದಲ್ಲಿ ಮಾತ್ರ ಇದು ಆಗಿಲ್ಲ. ರಾಜ್ಯದ 137 ಶಾಸಕರು ಈಗಾಗಲೇ ಪರಿಶಿಷ್ಟ ಜಾತಿಗೆ ಈ ಸಮುದಾಯ ಸೇರಲು ಅರ್ಹ ಎಂದು ಶಿಫಾರಸು ಪತ್ರ ಕೊಟ್ಟಿದ್ದಾರೆ. ರಾಜ್ಯ ಸರ್ಕಾರ ಈ ಬಗೆಗಿನ ನಿರ್ಧಾರವನ್ನು ಕೇಂದ್ರಕ್ಕೆ ತಲುಪಿಸುವುದಷ್ಟೇ ಬಾಕಿ ಇದೆ. ಹೀಗಿದ್ದರೂ ನಿರ್ಲಕ್ಷ್ಯ ವಹಿಸಿರುವ ಕಾರಣ ಈ ಹೋರಾಟ ಹಮ್ಮಿಕೊಳ್ಳಲಾಗುತ್ತಿದೆ. ಸಮುದಾಯ ಎಲ್ಲ ರೀತಿಯಲ್ಲೂ ಹಿಂದುಳಿದಿರುವ ಕಾರಣ ಪರಿಶಿಷ್ಟ ಜಾತಿಗೆ ಸೇರಿಸಬೇಕಾದ ಅಗತ್ಯವಿದೆ. ಹೀಗಾಗಿ ಹೋರಾಟ ಯಶಸ್ವಿಗಳಿಸಬೇಕೆಂದು ಸಮುದಾಯದವರಲ್ಲಿ ಮನವಿ ಮಾಡಿದರು.

ಚಂದ್ರು, ನಂಜುಂಡಸ್ವಾಮಿ, ಸತೀಶ್, ವಿಜಯಲಕ್ಷ್ಮಿ, ಎನ್. ಜಗದೀಶ್‌ಕುಮಾರ್, ಸುನಂದ, ಎಂ.ಎನ್. ರಾಜೇಶ್, ಸಿದ್ದಪ್ಪಾಜ, ಶಿವಣ್ಣ ದುದ್ದಗೆರೆ ಇದ್ದರು.

# 15ರಂದು ಒಳಮೀಸಲಾತಿ ವಿಚಾರ ಸಂಕಿರಣ



ಚಾಮರಾಜನಗರ, ಕರ್ನಾಟಕ ರಾಜ್ಯ ಬಲಗೈ ಜಾತಿಗಳ ಒಕ್ಕೂಟ, ಗಡಿಕಟ್ಟೆ ಯಜಮಾನರುಗಳು ಹಾಗೂ ಆದಿ ಕರ್ನಾಟಕ ಅಭಿವೃದ್ಧಿ ಸಂಘದ ಆಸ್ತಿ ಸಂರಕ್ಷಣಾ ಸಮಿತಿಯು ಮಾ.15 ರಂದು ನಗರದ ಅಂಬೇಡ್ಕರ್ ಭವನದಲ್ಲಿ ಒಳಮೀಸಲಾತಿ ವಿಚಾರವಾಗಿ ಸಾಧಕ–ಬಾಧಕಗಳನ್ನು ಚರ್ಚಿಸಲು ವಿಚಾರ ಸಂಕಿರಣವನ್ನು ಹಮ್ಮಿಕೊಳ್ಳಲಾಗಿದೆ ಎಂದು ತಾ.ಪಂ.ಮಾಜಿ ಅಧ್ಯಕ್ಷ ಆರ್.ಮಹದೇವು ಹೇಳಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಭಾನುವಾರದಂದು ಬೆಳಿಗ್ಗೆ 10:30ಕ್ಕೆ ಆರಂಭವಾಗುವ ವಿಚಾರ ಸಂಕಿರಣ ಕಾರ್ಯಕ್ರಮದ ನೇತೃತ್ವವನ್ನು ಮೈಸೂರು ಉರಿಲಿಂಗಿಪೆದ್ದಿ ಮಠದ ಜ್ಞಾನಪ್ರಕಾಶ್ ಸ್ವಾಮೀಜಿ ವಹಿಸಲಿದ್ದಾರೆ. ಕೊಳ್ಳೇಗಾಲದ ಕ್ಷೇತ್ರದ ಶಾಸಕ ಎ.ಆರ್.ಕೃಷ್ಣಮೂರ್ತಿ ಅಧ್ಯಕ್ಷತೆ ವಹಿಸುವವರು, ಕರ್ನಾಟಕ ರಾಜ್ಯ ಎಸ್ ಸಿ, ಎಸ್ ಟಿ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾದ ಚಂದ್ರಶೇಖರಯ್ಯ ಅವರು ವಿಚಾರ ಮಂಡನೆ ಮಾಡಲಿದ್ದಾರೆ.ಈ ಕಾರ್ಯಕ್ರಮಕ್ಕೆ ಬಲಗೈ ಸಮುದಾಯ ಮಾಜಿ ಶಾಸಕರು, ಕಡಿಕಟ್ಟೆ ಯಜಮಾನರು, ಸಂಘ– ಸಂಸ್ಥೆ ಯ ಅಧ್ಯಕ್ಷರು, ಪದಾಧಿಕಾರಿಗಳು, ಗ್ರಾಮಗಳ ಯಜಮಾನರುಗಳು, ಹಾಲಿ ಮಾಜಿ ಚುನಾಯಿತ ಜನಪ್ರತಿನಿಧಿಗಳು, ಸಮಾಜದ ಕುಲಬಾಂದವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿಕೊಡಬೇಕು ಎಂದು ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಜಿ.ಪಂ.ಮಾಜಿ ಉಪಾಧ್ಯಕ್ಷ ಅಯ್ಯನಪುರ ಶಿವಕುಮಾರ್, ಚಾಮುಲ್ ನಿರ್ದೇಶಕ ಕಮರವಾಡಿ ರೇವಣ್ಣ,ನಗರಸಭಾ ಮಾಜಿ ಸದಸ್ಯ ಆರ್. ಪಿ.ನಂಜುಂಡಸ್ವಾಮಿ, ನಲ್ಲೂರು ಮಹಾದೇವ ಸ್ವಾಮಿ, ಗಡಿ ಯಜಮಾನರಾದ ಸೋಮಣ್ಣ, ರಂಗಸ್ವಾಮಿ, ನಾಗಯ್ಯ, ರಾಮಸಮುದ್ರ ಪಾಪಣ್ಣ ಹಾಜರಿದ್ದರು.

# ಸ್ತ್ರೀಯರೊಂದಿಗೆ ಪೊಲೀಸರು ಗೌರವಯುತವಾಗಿ ವರ್ತಿಸಿ

## ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌದರಿ ಸೂಚನೆ



ಮೈಸೂರು: ಪೊಲೀಸ್ ಠಾಣೆಯಲ್ಲಿ ಮಹಿಳೆಯರು ದೂರು ದಾಖಲಿಸಲು ಅಥವಾ ಯಾವುದೇ ರೀತಿಯ ಮಾಹಿತಿ ಪಡೆಯಲು ಬಂದಾಗ ಅವರೊಂದಿಗೆ ಗೌರವಯುತವಾಗಿ ವರ್ತಿಸಿ ಎಂದು ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌದರಿ ತಿಳಿಸಿದರು.

ಪ್ರಾದೇಶಿಕ ಆಯುಕ್ತರ ಚಾಮುಂಡೇಶ್ವರಿ ಸಭಾಂಗಣದಲ್ಲಿ ಜನ ಸುನ್ವಾಯಿ ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿದರು. ಮಹಿಳೆಯರು ಯಾವುದೇ ರೀತಿಯ ತೊಂದರೆ ಉಂಟಾದರು ನಿರ್ಭಯವಾಗಿ ಪೊಲೀಸ್ ಠಾಣೆಗೆ ಆಗಮಿಸಿ ದೂರು ಸಲ್ಲಿಸುವಂತಾಗಬೇಕು. ಕಟ್ಟಕಡೆಯ ಮಹಿಳೆಗೂ ನ್ಯಾಯ ಒದಗಿಸುವುದು ಆಯೋಗದ ಉದ್ದೇಶವಾಗಿದೆ. ಪೊಲೀಸ್ ಇಲಾಖೆ ಜನಸ್ನೇಹಿಯಾಗಿ ಕೆಲಸ ನಿರ್ವಹಿಸುತ್ತಿದ್ದು, ಇಲಾಖೆ ವತಿಯಿಂದ ನಡೆಸಲಾಗುವ ಕಾರ್ಯಕ್ರಮದ ಬಗ್ಗೆ ಹೆಚ್ಚಿನ ಪ್ರಚಾರ ನೀಡಿ ಇದರಿಂದ ಜನರಿಗೆ ಅನುಕೂಲವಾಗಲಿದೆ ಎಂದರು.

ಮಹಿಳೆಯರು ಪೊಲೀಸ್ ಠಾಣೆಗೆ ಭೇಟಿ ನೀಡಿದಾಗ ಸೌಜನ್ಯದಿಂದ ವರ್ತಿಸಿ, ಅವರಲ್ಲಿ ಆತ್ಮ ವಿಶ್ವಾಸ ತುಂಬಿ. ಮಹಿಳೆಯರು ಪೊಲೀಸ್ ಠಾಣೆಗೆ ಭೇಟಿ ನೀಡಿದಾಗ ಅನುಚಿತ ವರ್ತನೆ ಕಂಡುಬಂದಲ್ಲಿ ಹಿರಿಯ ಅಧಿಕಾರಿ ಗಳನ್ನು ಭೇಟಿ ಮಾಡಿ ತಪ್ಪದೇ ದೂರು ಸಲ್ಲಿಸಿ ಎಂದರು.

**ಅಪರಾಧ ಸಂಖ್ಯೆ ಇಳಿಕೆ**

**2023 ನೇ ಸಾಲಿನಿಂದ ಗಮನಿಸಿದರೆ ಮೈಸೂರು ನಗರ ವ್ಯಾಪ್ತಿಯಲ್ಲಿ ಅಪರಾಧಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿರುತ್ತದೆ. ಅಪರಾಧ ಕೃತ್ಯಗಳನ್ನು ತಡೆಗಟ್ಟಲು ಸಾರ್ವಜನಿಕರು ಸಹ ಪೊಲೀಸ್ ಇಲಾಖೆಯೊಂದಿಗೆ ಸಹಕರಿಸಬೇಕು ಎಂದರು.**

ಸರ್ಕಾರಿ ಸೇರಿ ಖಾಸಗಿ ಸಂಸ್ಥೆಗಳಲ್ಲಿ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ತಡೆಗಟ್ಟಲು ಪಾಷ್ ಸಮಿತಿ ಇದೆ. ಸಮಿತಿ ಮೂರು ತಿಂಗಳಿಗೊಮ್ಮೆ ಸಭೆ ನಡೆಸಬೇಕು.ಇದರ ಅನುಷ್ಠಾನ ಕುರಿತು ಪರಿಶೀಲನೆ ನಡೆಸುವಂತೆ ತಿಳಿಸಿದರು.

ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಮಾತನಾಡಿ ಪೊಲೀಸ್ ಇಲಾಖೆಯಿಂದ ಹಲವಾರು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಹೆಣ್ಣು ಮಕ್ಕಳು ಯಾವುದಾದರೂ ಶೋಷಣೆಗೆ ಒಳಗಾದರೆ ತಕ್ಷಣ ಹತ್ತಿರದ ಪೊಲೀಸ್ ಠಾಣೆಯನ್ನು ಸಂಪರ್ಕಿಸಿ ಎಂದರು.

ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಸಭೆಗೆ ಬಹಳಷ್ಟು ಮಹಿಳೆಯರು ನಿವೇಶನ, ಮೂಲಭೂತ ಸೌಕರ್ಯಗಳ ಬಗ್ಗೆ ಮನವಿ ಸಲ್ಲಿಸಿದವರಿಗೆ ಸಂಬಂಧಿಸಿದ ಅಧಿಕಾರಿಗಳನ್ನು ಸಂಪರ್ಕಿಸುವಂತೆ ಮಾಹಿತಿ ನೀಡಿದರು.

ಸಭೆಯಲ್ಲಿ ಮಹಿಳೆಯೊಬ್ಬರು ತಮಗೆ ಖಾಸಗಿ ಸಂಸ್ಥೆಯಿಂದ ಇರಲು ಮನೆ ಸೇರಿ ಮೂಲಸೌಲಭ್ಯಗಳ ತೊಂದರೆಯಾಗುತ್ತಿರುವ ಬಗ್ಗೆ ತಿಳಿಸಿದಾಗ ಅಪರ ಜಿಲ್ಲಾಧಿಕಾರಿ ಸ್ಪಂದಿಸಿ ಪೂರ್ಣ ಮಾಹಿತಿಯೊಂದಿಗೆ ಜಿಲ್ಲಾಧಿಕಾರಿಗಳ ಕಚೇರಿಗೆ ಭೇಟಿ ನೀಡುವಂತೆ ತಿಳಿಸಿದರು.

ಎ.ಸಿ.ಪಿ ಗಂಗಾಧರ್ ಸ್ವಾಮಿ ಮಾತನಾಡಿ ಪ್ರತಿ ಮಾಹೆ ಜನಸಂಪರ್ಕ ಸಭೆ, ಪ್ರತಿ ಮಾಹೆಯ ಕೊನೆಯ ಭಾನುವಾರ ಶೋಷಣೆಗೆ ಒಳಗಾದವರ ದಿನ, ಮನೆ ಮನೆ ಪೊಲೀಸ್ ಸೇರಿ ಪೊಲೀಸ್ ಇಲಾಖೆಯ ವಿವಿಧ ಕಾರ್ಯಕ್ರಮಗಳ ಬಗ್ಗೆ ವಿವರಿಸಿದರು. ಸಭೆಯಲ್ಲಿ ಎ. ಎಸ್.ಪಿ ನಾಗೇಶ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಬಸವರಾಜು ಸೇರಿ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

### ಹೆಣ್ಣು ಮಕ್ಕಳ ರಕ್ಷಣೆಗಾಗಿ ಅಕ್ಕ ಪಡೆ

**ಹೆಣ್ಣು ಮಕ್ಕಳ ರಕ್ಷಣೆಗಾಗಿ ಅಕ್ಕ ಪಡೆ ಎಂಬ ಪೊಲೀಸ್ ಇಲಾಖೆ ವಾಹನವು ಮುಖ್ಯವಾಗಿ ಕಾಲೇಜು, ತೊಂದರೆ ಇರುವ ಸ್ಥಳಗಳಲ್ಲಿ ಹೆಚ್ಚು ಗಸ್ತು ಮಾಡಲಾ ಗುತ್ತದೆ. ಮೈಸೂರು ನಗರದಲ್ಲಿ ಮಾದಕ ವಸ್ತುಗಳ ಸೇವನೆ ಹಾಗೂ ಸಾಗಣಿಕೆ ಯನ್ನು ತಡೆಗಟ್ಟಲು ವಿಮುಕ್ತಿ ಯೋಜನೆಯನ್ನು ಜಾರಿಗೆ ತರಲಾಗಿದೆ ಎಂದರು.**

### ಡಿಟಿಪಿ ತರಬೇತಿಗೆ ಅರ್ಜಿ ಆಹ್ವಾನ




ಬೆಂಗಳೂರು: ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಟ್ರಸ್ಟ್ ಮತ್ತು ಕೆನರಾ ಬ್ಯಾಂಕ್ನ ಸಹಯೋಗದಲ್ಲಿ ನಡೆಸುತ್ತಿರುವ ರುಡ್ಸೆಟ್ ಸಂಸ್ಥೆಯ ವತಿಯಿಂದ ಹಮ್ಮಿಕೊಂಡಿರುವ ಏಪ್ರಿಲ್ 02 ರಿಂದು ಕಂಪ್ಯೂಟರ್ ಡಿಟಿಪಿ ಕುರಿತು 45 ದಿನಗಳ ಉಚಿತ ತರಬೇತಿಯನ್ನು ಹಮ್ಮಿಕೊಳ್ಳಲಾಗಿದ್ದು, ಗ್ರಾಮೀಣ ಆಸಕ್ತ ನಿರುದ್ಯೋಗಿ ಯುವಕ–ಯುವತಿಯರಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು 18 ರಿಂದ 50 ವರ್ಷ ವಯೋಮಾನದವರಾಗಿದ್ದು, ಕನ್ನಡ ಭಾಷೆ ಓದಲು ಮತ್ತು ಬರೆಯಲು ಬಲ್ಲವರಾಗಿರಬೇಕು. ಗ್ರಾಮೀಣ ಭಾಗದ ಬಿಪಿಎಲ್ ಕಾರ್ಡ್ ಅಥವಾ ಆಧಾರ್ ಕಾರ್ಡ್ ಗಳನ್ನು ಕಡ್ಡಾಯವಾಗಿ ಹೊಂದಿರಬೇಕು. ಹೆಚ್ಚಿನ ಮಾಹಿತಿಗಾಗಿ ರುಡ್ ಸೆಟ್ ಸಂಸ್ಥೆ, ಅರಿಶಿನಕುಂಟೆ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಮೊಬೈಲ್ ಸಂಖ್ಯೆ: 9380162042, 9481506564, 9481778047 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಬೆಂಗಳೂರು ಶಾಖೆ, ರುಡ್ ಸೆಟ್ ಸಂಸ್ಥೆಯ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಇಂದು ಶ್ರೀ ಶನೇಶ್ವರ ಸ್ವಾಮಿ 35ನೇ ಆರಾಧನಾ ಮಹೋತ್ಸವ

ಚಾಮರಾಜನಗರ, ತಾಲೂಕಿನ ಚಂದಕವಾಡಿ ಗ್ರಾಮ ಪಂಚಾಯಿತಿ ಕಚೇರಿ ಹಿಂಭಾಗ ಇರುವ ಶ್ರೀ ಶನೇಶ್ವರ ಸ್ವಾಮಿ ಯವರ ದೇವಸ್ಥಾನದಲ್ಲಿ ಶ್ರೀ ಶನೇಶ್ವರ ಸ್ವಾಮಿಯವರ 35ನೇ ವರ್ಷದ ಆರಾಧನಾ ಮಹೋ ತ್ಸವದ ಅಂಗವಾಗಿ ಮಾರ್ಚ್ 14ರಂದು 36 ಜೋಡಿ ಸಾಮೂಹಿಕ ವಿವಾಹ ಮಹೋ ತ್ಸವವನ್ನು ಏರ್ಪಡಿಸಲಾಗಿದೆ.

ಅಂದು ಬೆಳಿಗ್ಗೆ ಶನಿವಾರ 9:00 ಗಂಟೆಗೆ ನವಗ್ರಹಗಳ ಕಲಶ ಹಾಗೂ ಸ್ವಾಮಿ ಅವರ ಉತ್ಸವ ಮೂರ್ತಿಯ ಪಲ್ಲಕ್ಕಿ ಮೆರವಣಿಗೆ ಕಥಾ ಕಾಲಕ್ಷೇಪ ನಂತರ ಸಾಮೂಹಿಕ ವಿವಾಹ ನಡೆಯಲಿದ್ದು, ಅಲ್ಲದೆ ರಥೋತ್ಸವ ಹಾಗೂ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ ಭಕ್ತಾದಿಗಳು ತನು, ಮನ, ಧನ ದೊಂದಿಗೆ ಸಹಕರಿಸಿ ಕಾರ್ಯಕ್ರಮವನ್ನು,ಯಶಸ್ವಿಗೊಳಿಸಿಕೊಡಬೇಕೆಂದು ಮಹೋತ್ಸವ ಸಮಿತಿಯ ಸಿ. ಎಲ್. ರಂಗರಾಮು ಮನವಿ ಮಾಡಿದ್ದಾರೆ.

# ಸಂವಿಧಾನದಿಂದ ಸ್ತ್ರೀಯರಿಗೆ ಹಕ್ಕು ಸಿಕ್ಕಿದೆ

ಚಾಮರಾಜನಗರ:ನಗರದ ಅಂಬೇಡ್ಕರ್ ಸರ್ಕಾರಿ ಅನುದಾನಿತ ಕೃತ ಕಾಲೇಜಿನ ವಿದ್ಯಾರ್ಥಿನಿಲಯದಲ್ಲಿ ಮಾನಸ ಜಿಲ್ಲಾಸಂಪನ್ಮೂಲ ಕೇಂದ್ರದ ವತಿಯಿಂದ ಅಂತಾರಾಷ್ಟ್ರೀಯ ಮಹಿಳಾದಿನಾಚರಣೆ ಕಾರ್ಯಕ್ರಮ ಆಚರಿಸಲಾಯಿತು.

ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿದ ಅನುಪಮಾ ಜಸೇವಾಟ್ರಸ್ಟ್ ಅಧ್ಯಕ್ಷೆ ಡಾ.ಪ್ರೇಮಾ ಮಾತನಾಡಿ, ದೇಶಕ್ಕೆ ಸ್ವಾತಂತ್ರ ಬಂದ ನಂತರ ಸಾಕಷ್ಟು ಬದಲಾವಣೆಯಾಗಿದೆ. ಡಾ.ಬಿ.ಆರ್.ಅಂಬೇಡ್ಕರ್ ಅವರ ಸಂವಿಧಾನದಲ್ಲಿ ಮಹಿಳೆಯರಿಗಾಗಿ ಹಕ್ಕುಗಳನ್ನು ಒದಗಿಸಲಾಗಿದೆ, ಮತದಾನದಿಂದ ವಂಚಿತರಾಗಿ ದ್ದವರಿಗೆ ಮತದಾನದ ಹಕ್ಕನ್ನು ಕೊಡಿಸಿದರು. ಎಲ್ಲ ಕ್ಷೇತ್ರದಲ್ಲೂ ಮಹಿಳೆಯರು ಮುಂಚೂಣಿ ಯಲ್ಲಿದ್ದಾರೆ, ಆದರೂ ಅವರ ಮೇಲೆಇನ್ನು ಸಹ ಶೋಷಣೆ, ದಬ್ಬಾಳಿಕೆ ನಡೆಯುತ್ತಿದೆ, ಇದರಿಂದ ಮಹಿಳೆಯರು ಹೊರಬರ ಬೇಕಾದರೆ ಸುಶಿಕ್ಷಿತರಾಗುವುದೇ ಮುಂದಿನ ದಾರಿ ಎಂದರು. ಇಂದು ಶಿಕ್ಷಣ ತಂತ್ರ ಜ್ಞಾನ ಸೇರಿದಂತೆ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರು ಸೇವೆ ಸಲ್ಲಿಸುತ್ತಿದ್ದಾರೆ ಸಮಾಜದ ಉತ್ತಮ ಬೆಳವಣಿಗೆ ಎಂದರು.

ಮಾನಸ ಜಿಲ್ಲಾಸಂಪನ್ಮೂಲ ಕೇಂದ್ರದ ಸಂಯೋಜಕ ರೇವಣ್ಣ ಪ್ರಾಸ್ತಾವಿವಾಗಿ ಮಾತನಾಡಿದರು.



ಸಿದ್ದಾರ್ಥಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ರಂಗಸ್ವಾಮಿ, ಮಾತಬಾಡಿ ಅಂಬೇಡ್ಕರ್ ಜ್ಞಾನದ ಕಣಜವಾಗಿದ್ದು, ತಮ್ಮ ಜ್ಞಾನ ಸಂಪತ್ತಿನಿಂದಲೇ ವಿಶ್ವದ ಗಮನ ಸೆಳೆದು, ಪ್ರಪಂಚದಲ್ಲೇ ಅತ್ಯುತ್ತಮವಾದ ಸಂವಿಧಾನ ರಚನೆ ಮಾಡಿ, ಭಾರತ ವನ್ನು ಶ್ರೀಮಂತಗೊಳಿಸಿದರು ಸುಮಾರು 50 ಸಾವಿರಕ್ಕೂ ಹೆಚ್ಚು ಪುಸ್ತ ಕಗಳನ್ನು ಅಧ್ಯಯನ ನಡೆಸುವ ಮೂಲಕ ಜ್ಞಾನರತ್ನ ಎನಿಸಿಕೊಂಡರು, ವಿಶ್ವಜ್ಞಾನಿಯಾದರು. ಎಂದರು. ಸಿದ್ದಾರ್ಥಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ರಂಗಸ್ವಾಮಿ, ವಕೀಲೆ ಮಂಜುಳ, ವಾರ್ಡನ್ ಸರಸ್ವತಿ, ಜಾನಪದ ಕಲಾವಿದ ರಾಮಸಮುದ್ರ ಮಹೇಶ್, ಹಾಜರಿದ್ದರು.


**ಕರ್ನಾಟಕ ಸರ್ಕಾರ**
**ಕಾರ್ಯಪಾಲಕಇಂಜಿನಿಯರ್‌ರವರಕಛೇರಿ,**
**ಲೋಕೋಪಯೋಗಿ, ಇಲಾಖೆ ವಿಭಾಗ, ಮಂಡ್ಯ**

**ಸಂ: 30/2025–2026** **ದಿನಾಂಕ: 12.03.2026**

**ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಕಾಮಗಾರಿಗಾಗಿ ಅಲ್ಪಾವಧಿ ಟೆಂಡರ್ ಪ್ರಕಟಣೆ**

ಐಟಂವಾರು ದರದ ಟೆಂಡರುಗಳ ಕಾಮಗಾರಿಗಾಗಿ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ KW-3ರ ರೀತಿ ದ್ವಿಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮುಖಾಂತರ ಕಾಮಗಾರಿಯ ಟೆಂಡರ್‌ಗಾಗಿ ಭಾಗವಹಿಸಬಹುದು. ಟೆಂಡರ್ ದಾಖಲಾತಿಗಳನ್ನು ದಿನಾಂಕ 13–03–2026 ರಿಂದ ಇ–ಪೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್ ವಿಚಾರಣೆ ದಿನಾಂಕ 25–03–2026 ಸಂಜೆ 4.00 ಘಂಟೆವರೆಗೆ, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ 26–03–2026 ಸಂಜೆ 4.30 ಘಂಟೆವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ 27–03–2026 ಸಂಜೆ 4.31 ಘಂಟೆ ನಂತರ ಅಥವಾ ನಂತರದ ಕೆಲಸದ ದಿನಗಳು, ಆರ್ಥಿಕ ಬಿಡ್ ತೆರೆಯುವ ದಿನಾಂಕ 30–03–2026 ಬೆಳಿಗ್ಗೆ 11.00ಗಂಟೆಗೆ ಅಥವಾ ನಂತರದ ಕೆಲಸದ ದಿನಗಳು. ಟೆಂಡರ್ ಪ್ರಕ್ರಿಯೆ ಬೆಲೆ ಇ–ಪೋರ್ಟಲ್‌ರಂತೆ. ಕಾಲಮಿತಿ: ಮಳೆಗಾಲ ಸೇರಿ 3 ತಿಂಗಳು ಒಟ್ಟು 1 (ಒಂದು) ಕಾಮಗಾರಿಗಳ ಪೈಕಿ ಗರಿಷ್ಠ ಅಂದಾಜು ಮೊತ್ತ ರೂ.100.00 ಲಕ್ಷಗಳು ಇ.ಎಂ.ಡಿ. ಬೆಲೆ ಇ–ಪೋರ್ಟಲ್‌ರಂತೆ, ಕೆಲಸಗಳ ವಿವರ, ಅಂದಾಜು ಮೊತ್ತ, ಇ.ಎಂ.ಡಿ., ಮೊತ್ತ ಮುಂತಾದ ಮಾಹಿತಿಗಳನ್ನು ಸದರಿ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಟಿಪ್ಪಣಿ: 1. ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯ ಮುಂದೂಡುವಿಕೆ /ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ.

2. ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

**ಸಹಿ/– ಕಾ.ಇಂ.,ಲೋ.ಇ., ವಿಭಾಗ, ಮಂಡ್ಯ**


# ರಾಜಕೀಯದಲ್ಲಿ ಮಿತಿ ಮೀರಿದ ವಂಶಪಾರಂಪರ್ಯ ಆಡಳಿತ, ಭ್ರಷ್ಟಾಚಾರ



ಚಾಮರಾಜನಗರ, ರಾಜಕೀಯ ರಂಗದಲ್ಲಿ ವಂಶಪಾರಂಪರ್ಯ ಆಡಳಿತ, ಭ್ರಷ್ಟಾಚಾರ, ಸ್ವಜನ ಪಕ್ಷಪಾತ ಮಿತಿ ಮೀರಿದ್ದು, ಇದನ್ನು ಸುಧಾರಿಸಲು ಯುವಜನರು ಜಾಗೃತಿಗೊಳ್ಳಬೇಕು ಎಂದು ಹಿರಿಯ ನಟ ಮುಖ್ಯಮಂತ್ರಿ ಚಂದ್ರು ಸಲಹೆ ನೀಡಿದರು.

ನಗರದ ಜೆ.ಎಚ್. ಪಟೇಲ್ ಸಭಾಂಗಣದಲ್ಲಿ ಮೈಸೂರಿನ ದಾರಿ ಫೌಂಡೇಶನ್, ನಗರದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಸಹಯೋಗದೊಂದಿಗೆ ಆಯೋಜಿಸಿದ್ದ "ಭವಿಷ್ಯದಲ್ಲಿ ಪ್ರಜಾಪ್ರಭುತ್ವದ ರಕ್ಷಣೆ ಜವಾಬ್ದಾರಿ ಯುವ ಶಕ್ತಿಯ ಕೈಯಲ್ಲಿ–ಮುಕ್ತ ಸಂವಾದ" ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಪಕ್ಷಭೇದವಿಲ್ಲದೇ ಈಗ ವಂಶಪಾರಂಪರ್ಯ ರಾಜಕಾರಣ ನಡೆಯುತ್ತಿದೆ. ರಾಜಕೀಯ ಮುಖಂಡರ ಮಕ್ಕಳು, ಸೋದರರೇ ಶಾಸಕರು, ಸಚಿವರಾಗುತ್ತಿದ್ದಾರೆ. ಒಂದೊಂದು ಜಿಲ್ಲೆಯನ್ನು ಒಬ್ಬೊಬ್ಬರು ಹಿಡಿದರೆ ಜನಸಾಮಾನ್ಯರ ಗತಿಯೇನು? ಇದಕ್ಕೆ ಪ್ರಜಾಪ್ರಭುತ್ವ ಎನ್ನುತ್ತಾರಾ? ಇದರ ಸುಧಾರಣೆ ಯಾರು ಮಾಡಬೇಕು? ಯುವ ಜನರಾದ ನೀವು ಜಾಗೃತಿಗೊಳ್ಳಬೇಕು. ಯುವ ಜನತೆ ಕಡ್ಡಾಯವಾಗಿ ಮತದಾನ ಮಾಡಬೇಕು. ಚುನಾವಣೆಗೆ ನಿಲ್ಲಲೂ ಸಿದ್ಧರಿರಬೇಕು ಎಂದು ಹೇಳಿದರು.

ವಧು–ವರ ನೋಡುವಾಗ ಎಲ್ಲವನ್ನೂ ಪರೀಕ್ಷೆ ಮಾಡುತ್ತೇವೆ. ಅವನು ಉದ್ಯೋಗದಲ್ಲಿದ್ದಾನಾ? ಒಳ್ಳೆಯ ನಡತೆಯುಳ್ಳವನಾ? ಎಂದು ಪರಿಶೀಲನೆ ಮಾಡುತ್ತೇವೆ. ಆದರೆ ಚುನಾವಣೆಗೆ ಸ್ಪರ್ಧಿಸಿರುವ ಜನಪ್ರತಿನಿಧಿಯಾಗುವವನನ್ನು ಆರಿಸುವಾಗ ಮೈಮರೆಯುತ್ತೇವೆ. ಸ್ಪರ್ಧಿಗಳ ಜಾತಿ ನೋಡಿ ಮತ ಹಾಕಬೇಡಿ. ಯಾರು ಯೋಗ್ಯರು ಎಂದು ನಿರ್ಧರಿಸಿ ಮತ ಹಾಕಿ. ನಿಮ್ಮ ಕ್ಷೇತ್ರಕ್ಕೆ ಅಭಿವೃದ್ಧಿ ಕೆಲಸ ಮಾಡುವವರಿಗೆ ಮತ ಹಾಕಿ. ಆತ್ಮಸಾಕ್ಷಿಯಂತೆ, ಕಡ್ಡಾಯವಾಗಿ ಮತ ಹಾಕಿ ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ತರಕಾರಿ ಕೊಳ್ಳುವಾಗ ಇದು ಚೆನ್ನಾಗಿದೆಯಾ? ಇದು ತಾಜಾ ಇದೆಯಾ? ಎಂದು ಪರೀಕ್ಷಿಸಿ ಕೊಳ್ಳುತ್ತೀರಿ. ಇದೇ ರೀತಿಯ ಕಾಳಜಿ ಜನಪ್ರತಿನಿಧಿ ಆರಿಸುವಾಗಲೂ ಇರಬೇಕು ಎಂದು ಸಲಹೆ ನೀಡಿದರು.

ರೈತರು ಬೆಳೆದ ಬೆಳೆಗಳಿಗೆ ಬೆಲೆಯಿಲ್ಲ. ಬೆಳೆಯುವ ರೈತನಿಗೆ ಹಣ ದೊರಕುವುದಿಲ್ಲ. ಮಧ್ಯವರ್ತಿಗಳಿಗೆ ಅದರ ಲಾಭ ದೊರಕುತ್ತಿದೆ. ಹತ್ತಿ ಬೆಳೆದವನಿಗೆ ಬೆಲೆ ಇಲ್ಲ. ಕಾಟನ್ ಇಂಡಸ್ಟ್ರೀಸ್ ಲಾಭ ಮಾಡುತ್ತಾರೆ. ಟೊಮೆಟೋ ಬೆಳೆದವನಿಗೆ ದರ ಇಲ್ಲ. ಸಾಸ್, ಕೆಚಪ್ ಮಾಡಿದವರಿಗೆ ಬೆಲೆ ದೊರಕುತ್ತದೆ. ಜನಪ್ರತಿನಿಧಿಗಳಾದವರು ರೈತರು ಬೆಳೆದ ಬೆಳೆಗಳಿಗೆ ಉತ್ತಮ ಬೆಲೆ ಕೊಡಿಸಲು ಕಾಳಜಿ ವಹಿಸಬೇಕು ಎಂದು ಹೇಳಿದರು.


ಪತ್ರಕರ್ತ ಕೆ.ಎಸ್.ಬನಶಂಕರ ಆರಾಧ್ಯ ಮಾತನಾಡಿ, ಜಗತ್ತಿನಲ್ಲಿ ಅತಿ ಹೆಚ್ಚು ಯುವ ಜನರನ್ನು ಹೊಂದಿರುವ ದೇಶ ಭಾರತ. ಯುವಜನರೇ ದೇಶದ ಭವಿಷ್ಯ. ಮೂಢನಂಬಿಕೆಗಳನ್ನು ಬಿಡಿ. ವೈಜ್ಞಾನಿಕವಾಗಿ ಚಿಂತಿಸಿ. ಸಾಮಾಜಿಕ ಜಾಲತಾಣಗಳಲ್ಲಿ ಬರುವ ಸುಳ್ಳು ಮಾಹಿತಿಗಳನ್ನು ಪರಿಶೀಲಿಸಿ. ಮೊಬೈಲ್ ಗೆ ಬಂದದ್ದನ್ನೆಲ್ಲ ಪರಾಮರ್ಶಿಸದೇ ಫಾರ್ವರ್ಡ್ ಮಾಡಬೇಡಿ ಎಂದರು.

ಸಕರ್ಕಾರಿ ಪ್ರಥಮ ದಜರ್ಜೆ ಮಹಿಳಾ ಕಾಲೇಜಿನ ಪ್ರಾಂಶುಪಾಲ ಪ್ರೊ.ಬಿ.ಎಸ್.ಮಹದೇವಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಆರ್.ಎನ್.ಸಿದ್ದಲಿಂಗಸ್ವಾಮಿ, ಪ್ರಧಾನ ಕಾರ್ಯದರ್ಶಿ ಪ್ರಸಾದ್ ಲಕ್ಕೂರು, ರಾಜ್ಯ ಶಾಸ್ತ್ರ ವಿಭಾಗದ ಮುಖ್ಯಸ್ಥ ಶೈಲೇಶ್ ಕುಮಾರ್, ದಾರಿ ಫೌಂಡೇಶನ್ ಅಧ್ಯಕ್ಷ ಎಲ್.ರಂಗಯ್ಯ, ಸಂಚಾಲಕ ಪ್ರಭಾಕರ್, ಕಾರ್ಯದರ್ಶಿ ತಗಡೂರು ವೀರೇಶ್‌ಕುಮಾರ್, ಖಜಾಂಚಿ ವಿಶ್ವನಾಥ್ ಕುಲಕರ್ಣಿ,ಜಾನಪದ ಗಾಯಕ ಸಿ.ಎಂ.ನರಸಿಂಹಮೂರ್ತಿ, ತೋಂಟೇಶ್, ಶಾಂತರಾಜು ಪ್ರಾಧ್ಯಾಪಕರಾದ ಡಾ ಬಿ.ಆರ್. ಜಯಣ್ಣ, ಮಲ್ಲಣ್ಣ, ಇದ್ದರು.

# ಖನಿಜದ ಆಗರ ಅಳಿವೆ (ಹಲೀಮ್ ಸೀಡ್ಸ್)

ಅಳಿವೆ ಬೀಜ ಈ ಹೆಸರು ಕೇಳಿದೊಡನೆ ಮಹಿಳೆಯರು ಅಲರ್ಟ್ ಆಗುತ್ತಾರೆ. ಕೆಲವರು ಕಣ್ಣರಳಿಸಿ ನಕ್ಕರೆ, ಮತ್ತೆ ಕೆಲವರು ವಾಕರಿಕೆ ಬಂದವರಂತೆ ಮುಖ ಕಿವುಚಿಕೊಳ್ಳುತ್ತಾರೆ. ಇನ್ನೂ ಕೆಲವರು ತಾವು ತಾಯಿಯಾಗಿ ಸಂಭ್ರಮಿಸಿದ ಆ ಕ್ಷಣದ ನೆನಪುಗಳಲ್ಲಿ ತೇಲಿ ಹೋಗುತ್ತಾರೆ. ಅಂದಹಾಗೆ ಬಹುತೇಕ ಮಹಿಳೆಯರಿಗೆ ಅದರಲ್ಲೂ ಹಳ್ಳಿಗಳಲ್ಲಿ, ತವರು ಮನೆಯಲ್ಲಿ ಹೆರಿಗೆಯ ದಿನಗಳನ್ನು ಕಳೆದವರಿಗೆ ಅಳಿವೆ ಬೀಜ ಅಂದಕೂಡಲೆ ನೆನಪಾಗುವುದು ತಾವು ಬಾಣಂತಿಯಾಗಿದ್ದ ದಿನಗಳು.





✍ಸೌಮ್ಯಸನತ್

**ಬಾಣಂತಿಯರ ಧಾನ್ಯ:** ಅತ್ಯಂತ ಪೌಷ್ಟಿಕ ಧಾನ್ಯವಾಗಿರುವ ಅಳಿವೆಯನ್ನು ಬಾಣಂತಿಯರ ಧಾನ್ಯ ಎಂದೂ ಕರೆಯುತ್ತಾರೆ. ಹೆರಿಗೆಯ ಬಳಿಕ ಬಾಣಂತಿಯರಲ್ಲಿ ಸಾಮಾನ್ಯವಾಗಿ ಕಾಣಿಸಿಕೊಳ್ಳುವ ಸೊಂಟ ನೋವು ನಿವಾರಿಸಲು ಅಳಿವೆ ಬೀಜಗಳಿಂದ ತಯಾರಿಸಿದ ಆಹಾರ (ಪಾಯಸ, ಉಂಡೆ, ಲಡ್ಡು) ನೀಡಲಾಗುತ್ತದೆ. ಸೊಂಟದ ಕೆಳಭಾಗದಲ್ಲಿ ಇರುವ ಶ್ರೋಣಿಯ ಸ್ನಾಯುಗಳಿಗೆ (ಪೆಲ್ವಿಕ್ ಮಸಲ್ಸ್) ಶಕ್ತಿ ತುಂಬುವಲ್ಲಿ ಅಳಿವೆ ಬಹುಮುಖ್ಯ ಪಾತ್ರ ವಹಿಸುತ್ತದೆ. ಜೊತೆಗೆ ತಾಯಂದಿರ ಎದೆಹಾಲು ಹೆಚ್ಚಿಸುವುದು ಈ ಅಳಿವೆಯ ವಿಶೇಷ ಗುಣವಾಗಿದೆ.

ಹಿಂದೆಲ್ಲಾ ಅಜ್ಜಿಯರು ಮೊಮ್ಮಕ್ಕಳ ಬಾಣಂತನ ಮಾಡುವಾಗ ಒಂದು ದಿನ ಕೂಡ ಈ ಅಳಿವೆಯ ಆಹಾರ ತಪ್ಪುತ್ತಿರಲಿಲ್ಲ. ಬೆಳ್ಳಂ ಬೆಳಗ್ಗೆಯೇ ನೀರಿನ ದೊಡ್ಡ ಲೋಟ ಒಂದಕ್ಕೆ ಅಳಿವೆ ಸುರಿದು, ಹಾಲು, ತುಪ್ಪ ಬೆರೆಸಿ ಸ್ವಲ್ಪ ಬಿಸಿ ಇರುವಂತೆಯೇ ಲೋಟವನ್ನು ಬಾಣಂತಿ ಮೊಮ್ಮಗಳ ಕೈಗೆ ತಂದಿಡುತ್ತಿದ್ದ ಅಜ್ಜಿ, ?ಕಣ್ ಮುಚ್ಕೊಂಡು ಕುಡಿಯವ್ವಾ? ಎಂದು ಹೇಳುತ್ತಿದ್ದರಂತೆ. ಅಳಿವೆ ರಸದ ಲೋಟ ಮೇಲೆತ್ತಿದರೆ ಖಾಲಿ ಆದ ನಂತರವೇ ಇಳಿಸಬೇಕು ಎಂಬ ಅಲಿಖಿತ ನಿಯಮವೂ ಇತ್ತಂತೆ. ಈಗಿನ ಬಾಣಂತಿಯರು ಆ ಸಂಪ್ರದಾಯಗಳನ್ನೆಲ್ಲಾ ಪಾಲಿಸುವುದಿಲ್ಲ. ಆದರೆ, ಅಳಿವೆ ರಸ ಕುಡಿಯುವುದ ಬಿಡುವುದಿಲ್ಲ. ಕೆಲವರಿಗೆ ಇದು ಅಚ್ಚುಮೆಚ್ಚಾದರೆ, ಇನ್ನೂ ಕೆಲವರಿಗೆ ಒಂಚೂರೂ ಇಷ್ಟವಾಗುವುದಿಲ್ಲ.

ಆರೋಗ್ಯ ಭಾಗ್ಯ

**ಪೌಷ್ಟಿಕಾಂಶದ ಶಕ್ತಿ ಕೇಂದ್ರ:** ಕನ್ನಡದಲ್ಲಿ ಅಳಿವೆ, ಅಳವೆ, ಆಳ್ವೆ, ಆಳಿವೆ, ಸಂಸ್ಕೃತದಲ್ಲಿ ನಂದಿನಿ, ಚಂದ್ರಿಕಾ, ಚಂದ್ರಸೂರ, ಹಿಂದಿಯಲ್ಲಿ ಹಲೀಮ್, ಮರಾಠಿಯಲ್ಲಿ ಅಳಿವರ್ಚ ಮತ್ತು ಆಂಗ್ಲಭಾಷೆಯಲ್ಲಿ ಗಾರ್ಡನ್ ಕ್ರೆಸ್ ಅಥವಾ ಕಾಮನ್ ಕ್ರೆಸ್ ಎಂಬ ಹೆಸರುಗಳಿಂದ ಕರೆಯಲ್ಪಡುವ ಈ ಬೀಜದ ಮಹತ್ವ ಬಲ್ಲವರೇ ಬಲ್ಲರು. ಅಳಿವೆ ಬೀಜಗಳಲ್ಲಿ ಖನಿಜದ ಅಂಶ ಯಥೇಚ್ಛವಾಗಿರುತ್ತದೆ. ಇದು ಲವಣ ಹಾಗೂ ವಿಟಮಿನ್‌ನ ಆಗರವೂ ಹೌದು. ಹಲೀಮ್ ಬೀಜಗಳು ಪೌಷ್ಟಿಕಾಂಶದ ಶಕ್ತಿ ಕೇಂದ್ರ ಎಂದೇ ಜನಪ್ರಿಯ. ಈ ಸಣ್ಣ ಬೀಜಗಳಲ್ಲಿ ಅನೇಕ ಆರೋಗ್ಯ ಪ್ರಯೋಜನಗಳು ತುಂಬಿದೆ. ಹಲೀಮ್ ಬೀಜಗಳಲ್ಲಿ ಪೌಷ್ಟಿಕಾಂಶ ಮಾತ್ರವಲ್ಲದೇ ಖನಿಜಗಳು, ವಿಟಮಿನ್ ಇ, ಎ, ಸಿ, ಕೆ, ಫೋಲಿಕ್ ಆಮ್ಲ, ಪ್ರೋಟೀನ್, ಕಬ್ಬಿಣ, ಫೋಲೇಟ್, ಕ್ಯಾಲ್ಸಿಯಂ, ಫಾಸ್ಪರಸ್, ಮೆಗ್ನಿಶಿಯಮ್ ಮತ್ತು ಫೈಬರ್‌ಗಳು ಕೂಡಾ ಇವೆ.ರೋಗ ನಿರೋಧಕ ಶಕ್ತಿ ಹೆಚ್ಚಿಸುವಲ್ಲಿ ಸಹಕಾರಿಯಾಗುವ ಅಳಿವೆ, ದೇಹಕ್ಕೆ ಶಕ್ತಿ ಒದಗಿಸುವುದು ಮಾತ್ರವಲ್ಲದೆ, ಹೀಮೋಗ್ಲೋಬಿನ್ ಪ್ರಮಾಣ ವೃದ್ಧಿಸುವಲ್ಲಿ ನೆರವಾಗುತ್ತದೆ. ಇದರ ಸೇವನೆಯಿಂದ ಜೀರ್ಣ ಕ್ರಿಯೆ ಉತ್ತಮಗೊಳ್ಳುತ್ತದೆ.ನಾಟಿ ವೈದ್ಯ ಪದ್ಧತಿ, ಆಯುರ್ವೇದ ವಿಜ್ಞಾನದಲ್ಲಿ ಅಳಿವೆಗೆ ಎಲ್ಲಿಲ್ಲದ ಮಹತ್ವವಿದೆ. ಹಲವಾರು ಅನಾರೋಗ್ಯ ಸಮಸ್ಯೆಗಳಿಗೆ ರಾಮಬಾಣವಾಗಿದ್ದರೂ, ಈ ಬೀಜಗಳ ಲಭ್ಯತೆ ಕಡಿಮೆ ಇರುವ ಕಾರಣ ಬಾಣಂತಿಯರಿಗೆ ಮಾತ್ರ ಅಳಿವೆ ಬೀಜದ ಆಹಾರ ಮಾಡಿ ತಿನಿಸುತ್ತಾರೆ.

* ಎಲ್ಲರ ಆರೋಗ್ಯ ಕಾಪಾಡುವ ಈ ಸಣ್ಣ ಕೆಂಪು ಬಣ್ಣದ ಬೀಜಗಳು ಮಹಿಳೆಯರ ಆರೋಗ್ಯಕ್ಕೆ ತುಂಬಾ ಪ್ರಯೋಜನಕಾರಿ ಎಂದು ಪರಿಗಣಿಸಲಾಗಿದೆ. ಅನಿಯಮಿತ ಮುಟ್ಟಿನ ಸಮಸ್ಯೆ, ಹಾರ್ಮೋನ್ ಅಸಮತೋಲನ, ಸ್ತನ ಕ್ಯಾನ್ಸರ್, ನಿಯಂತ್ರಿಸಲು ಹಲೀಮ್ ಬೀಜದ ಪಾನೀಯ ಅತೀ ಅಗತ್ಯ.
* ದಿನನಿತ್ಯ ನಿಯಮಿತವಾಗಿ ಹಲೀಮ್ ಬೀಜಗಳ ಸೇವನೆ ಮಧುಮೇಹ ಇರುವವರಿಗೆ ಸಹಾಯಕ. ಈ ಬೀಜಗಳು ರಕ್ತದಲ್ಲಿನ ಗ್ಲಕೋಸ್ ಮಟ್ಟ ಕಡಿಮೆ ಮಾಡುತ್ತದೆ ಹಾಗೂ ರಕ್ತದಲ್ಲಿನ ಕೊಲೆಸ್ಟ್ರಾಲ್ ಮಟ್ಟವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ.
* ದೈನಂದಿನ ಸೇವನೆ ಹೃದಯದ ಆರೋಗ್ಯಕ್ಕೆ ಪ್ರಯೋಜನಕಾರಿ ಎನ್ನಲಾಗಿದೆ. ಇದು ಒಮೆಗಾ–3 ಕೊಬ್ಬಿನಾಮ್ಲಗಳ ಸಮೃದ್ಧ ಮೂಲ ಈ ಹಲೀಮ್ ಬೀಜ. ಇದು ಹೃದಯವನ್ನು ಆರೋಗ್ಯಕರವಾಗಿ ಮತ್ತು ಪಾರ್ಶ್ವವಾಯುಗಳಿಂದ ರಕ್ಷಿಸುತ್ತದೆ.
* ಆಸ್ತಮಾ ರೋಗಿಗಳು ಹಲೀಮ್ ಬೀಜ ಸೇವಿಸುವುದರಿಂದ ಶ್ವಾಸಕೋಶದ ಪ್ರಚೋದನೆ ಹೆಚ್ಚಿಸುತ್ತದೆ ಹಾಗೂ ಹೆಚ್ಚು ಅಗತ್ಯವಿರುವ ಪರಿಹಾರವನ್ನು ಒದಗಿಸುತ್ತದೆ ಎಂದು ವರದಿಯೊಂದು ತಿಳಿಸಿದೆ.
* ಕೆಲವರಿಗೆ ಬಿಕ್ಕಳಿಗೆ ಹತ್ತಿದರೆ ನಿಲ್ಲವುದೇ ಇಲ್ಲ. ಗಂಟೆಗಟ್ಟಲೆ ಬಿಕ್ಕಳಿಸುತ್ತಲೇ ಇರುತ್ತಾರೆ. ನೀರು ಕುಡಿಯುವುದು, ಉಸಿರು ಬಿಗಿ ಹಿಡಿಯುವುದು, ಹೊಟ್ಟೆ ಕೆಳಗೆ ನಾಡಿ ಮಲಗುವುದು ಸೇರಿ ಯಾವುದೇ ಉಪಾಯ ಮಾಡಿದರೂ ಬಿಕ್ಕಳಿಕೆ ನಿರಂತರವಾಗಿರುತ್ತವೆ. ಅಂತಹ ಸಂದರ್ಭದಲ್ಲಿ ಹೆಚ್ಚು ನುಣ್ಣಗೆ ಆಗದ ರೀತಿಯಲ್ಲಿ ಪುಡಿ ಮಾಡಿಟ್ಟ ಅಳಿವೆ ಬೀಜಗಳನ್ನು ಕಾಲು ಲೀಟರ್ ನೀರಿಗೆ ಬೆರೆಸಿ, 30ರಿಂದ 45 ನಿಮಿಷಗಳ ಕಾಲ ನೆನೆಸಿಡಬೇಕು. ಬಳಿಕ ಸ್ವಲ್ಪ ಗಟ್ಟಿಯಾಗುವ ಅಳಿವೆ ಪುಡಿಯನ್ನು ಎರಡು ಸ್ಪೂನ್ ತಿನಿಸಿದರೆ ಬಿಕ್ಕಳಿಕೆ ನಿಲ್ಲುತ್ತವೆ. ಉರಿ ಬಿಕ್ಕಳಿಕೆಗೆ ಇದು ರಾಮ ಬಾಣ ಎನ್ನಲಾಗುತ್ತದೆ.
* ಹಲೀಮ್ ಬೀಜಗಳು ಫೈಬರ್ ಮತ್ತು ಪ್ರೋಟೀನ್ ಸಮೃದ್ಧವಾಗಿದೆ. ಈ ಬೀಜ ಸೇವಿಸುವುದರಿಂದ ದೇಹ ಹೆಚ್ಚು ಶಕ್ತಿ ಪಡೆಯುತ್ತದೆ. ದೀರ್ಘಕಾಲದವರೆಗೆ ಹಸಿವು ಇರುವುದಿಲ್ಲ. ಪದೆ–ಪದೆ ತಿನ್ನುವುದರಿಂದ ದೂರವಿರಲು ಹಾಗೂ ತೂಕ ನಿಯಂತ್ರಣದಲ್ಲಿಡಲು ಈ ಹಲೀಮ್ ಬೀಜಗಳು ಉತ್ತಮ. ಬೆಳಿಗ್ಗೆ ಅಥವಾ ಊಟದ ನಡುವೆ ಖಾಲಿ ಹೊಟ್ಟೆಯಲ್ಲಿ ಹಲೀಮ್ ಬೀಜ ಸೇವಿಸುವುದರಿಂದ ಉತ್ತಮ ಫಲಿತಾಂಶ ಕಾಣಬಹುದು.
* ರಕ್ತಹೀನತೆಯಿಂದ ಬಳಲುತ್ತಿರುವವರಿಗೆ ಹಲೀಮ್ ಬೀಜ ಉತ್ತಮ. ಇದರಲ್ಲಿ ಕಬ್ಬಿಣಾಂಶ ಹೇರಳವಾಗಿದ್ದು, ದೇಹದಲ್ಲಿ ಹಿಮೋಗ್ಲೋಬಿನ್ ಮಟ್ಟವನ್ನು ವೇಗವಾಗಿ ಹೆಚ್ಚಿಸುತ್ತದೆ. ಇದರಲ್ಲಿರುವ ಕಬ್ಬಿಣ ಮತ್ತು ಫೋಲಿಕ್ ಆಮ್ಲ ರಕ್ತಹೀನತೆಯ ವಿರುದ್ಧ ಹೋರಾಡಲು ಸಹಾಯ ಮಾಡುತ್ತಾರೆ.
* 1 ಚಮಚ ಹಲೀಮ್ ಬೀಜ 12 ಮಿಗ್ರಾಂ ಕಬ್ಬಿಣವನ್ನು ನೀಡುತ್ತದೆ. ದೀರ್ಘಕಾಲದ ರಕ್ತಹೀನತೆಯಿಂದ ಬಳಲುತ್ತಿದ್ದರೆ ಅಥವಾ ಕಡಿಮೆ ಹಿಮೋಗ್ಲೋಬಿನ್ ಮಟ್ಟ ಹೊಂದಿದ್ದರೆ ಹಲೀಮ್ ಬೀಜಗಳನ್ನು ಅಗತ್ಯವಾಗಿ ಸೇವಿಸಬೇಕು.
* ಇದು ಚರ್ಮ ಮತ್ತು ಕೂದಲಿಗೆ ತುಂಬಾ ಪ್ರಯೋಜನಕಾರಿ ಎಂದು ಪರಿಗಣಿಸಲಾಗುತ್ತದೆ.

ಹಲೀಮ್ ಬೀಜ ತಿನ್ನುವುದರಿಂದ ಚರ್ಮದ ಸಡಿಲತೆ ಕಡಿಮೆಯಾಗುತ್ತದೆ. ಚರ್ಮದಲ್ಲಿನ ಸುಕ್ಕು ದೂರವಾಗುತ್ತದೆ. ಹಲೀಮ್ ಬೀಜ ತಿನ್ನುವುದರಿಂದ ಕೂದಲು ಉದುರುವಿಕೆಯ ಎಲ್ಲಾ ಸಮಸ್ಯೆಗಳನ್ನು ಪರಿಹಾರ ನೀಡುತ್ತದೆ.

* ಸಂದು ನೋವಾದಾಗ, ದೇಹದ ಯಾವುದೇ ಅಂಗಕ್ಕೆ ಹೊರಗಿನಿಂದ ಪೆಟ್ಟು ಬಿದ್ದ ರಕ್ತ ಹೆಪ್ಪುಗಟ್ಟಿದಾಗ ಅಳಿವೆ ಬೀಜಗಳನ್ನು ನೀರಿನಲ್ಲಿ ಅರೆದು, ಪೆಟ್ಟು ಬಿದ್ದ ಸ್ಥಳಕ್ಕೆ ಲೇಪಿಸಬೇಕು. ಇದರಿಂದ ತಕ್ಷಣವೇ ಹೆಪ್ಪುಗಟ್ಟಿದ ರಕ್ತ ಸರಿ ಹೋಗುತ್ತದೆ ಮತ್ತು ಸಂದು ನೋವು ಕೂಡ ಕಡಿಮೆಯಾಗುತ್ತದೆ. ಶಕ್ತಿವರ್ಧಕವಾಗಿರುವ ಅಳಿವೆ, ಕರುಳಿನ ಆರೋಗ್ಯ ಕಾಪಾಡುವ ಗುಣ ಹೊಂದಿದೆ. ಅಳಿವೆ ಸೇವನೆಯಿಂದ ಕೂದಲು ಉದುರುವಿಕೆ ನಿಯಂತ್ರಣಕ್ಕೆ ಬರುತ್ತದೆ. ಚರ್ಮದ ಸೌಂದರ್ಯ ಹೆಚ್ಚುತ್ತದೆ.



## ಗಮನಿಸಬೇಕಾದ ಅಂಶ:

ಅತಿಯಾದರೆ ಅಮೃತವೂ ವಿಷ ಎಂಬಂತೆ ಹಲೀಮ್ ಬೀಜಗಳನ್ನು ಕೂಡಾ ಅತಿಯಾಗಿ ಬಳಸದೆ, ದಿನನಿತ್ಯ ನಿಯಮಿತವಾಗಿ ಬಳಸಬೇಕು. ಈ ಬೀಜಗಳು ದೇಹದಿಂದ ಪೊಟ್ಯಾಸಿಯಮ್ ಅನ್ನು ಹೊರಹಾಕುವಿಕೆಯನ್ನು ಹೆಚ್ಚಿಸಬಹುದಾದ್ದರಿಂದ, ಪೊಟ್ಯಾಸಿಯಮ್ ಕೊರತೆಯಿರುವ ಜನರು ಇದನ್ನು ಹೆಚ್ಚಿನ ಪ್ರಮಾಣದಲ್ಲಿ ಸೇವಿಸುವುದನ್ನು ತಪ್ಪಿಸಬೇಕು. ಪ್ರತಿದಿನ ಹಲೀಮ್ ಬೀಜಗಳನ್ನು ಸೇವಿಸುವ ಮೊದಲು ಹಲವಾರು ಅಂಶಗಳನ್ನು ಪರಿಗಣಿಸಬೇಕು. ವೈದ್ಯರ ಸಲಹೆಯೊಂದಿಗೆ ವ್ಯಕ್ತಿಯ ವಯಸ್ಸು, ಆರೋಗ್ಯ, ಅಲರ್ಜಿಗಳು ಮತ್ತು ಇತರ ಪೂರ್ವ ಅಸ್ತಿತ್ವದಲ್ಲಿರುವ ಕಾಯಿಲೆಗಳನ್ನು ಪರಿಗಣಿಸಬೇಕು.

**ಅಳಿವೆ ಪಾಯಸ:** 100 ಎಂ.ಎಲ್ ಹಾಲನ್ನು ಒಲೆ ಮೇಲೆ ಕುದಿಯಲು ಇಟ್ಟು, ಹಾಲು ಸ್ವಲ್ಪ ಕುದಿ ಬಂದ ನಂತರ ಅದಕ್ಕೆ 10 ಗ್ರಾಂ. ಅಳಿವೆ ಬೀಜ ಇಲ್ಲವೇ ಅಷ್ಟೇ ಪ್ರಮಾಣದ ಅಳಿವೆ ಬೀಜದ ಪುಡಿಯನ್ನು ಹಾಕಬೇಕು. ಸಿಹಿಗಾಗಿ ಅಗತ್ಯದಷ್ಟು ಬೆಲ್ಲ ಹಾಕಿ ಚೆನ್ನಾಗಿ ಕುದಿಸಿದರೆ ಅಳಿವೆ ಪಾಯಸ ಸಿದ್ಧವಾಗುತ್ತದೆ. ಶಕ್ತಿ ವರ್ಧಕ ಹಾಗೂ ಆರೋಗ್ಯ ವರ್ಧಕವಾಗಿರುವ ಈ ಪಾಯಸವನ್ನು ಯಾರುಬೇಕಾದರೂ ಕುಡಿಯಬಹುದು. ಅಳಿವೆ ಪಾಯಸವನ್ನು ಬಾಣಂತಿಯರ ಪಾಯಸ ಎಂದೂ ಕರೆಯುತ್ತಾರೆ.

ಒಂದು ಟೀ ಚಮಚ ಅಳಿವೆ ಬೀಜಗಳನ್ನು ಚೆನ್ನಾಗಿ ತೊಳೆದು ರಾತ್ರಿ ಒಂದು ಲೋಟ ನೀರಿನಲ್ಲಿ ನೆನೆಸಿಡಬೇಕು. ಬೆಳಗ್ಗೆ ಎದ್ದ ನಂತರ 15 ನಿಮಿಷಗಳ ಕಾಲ ಒಲೆ ಮೇಲಿಟ್ಟು ಕುದಿಸಿ, ಹಾಲು ಮತ್ತು ತುಪ್ಪ, ಸಕ್ಕರೆ ಅಥವಾ ಬೆಲ್ಲ ಬೆರೆಸಿ ಸೇವಿಸಬೇಕು (ಸಿಹಿ ತಿನ್ನದವರು ಸಕ್ಕರೆ, ಬೆಲ್ಲ ಬೆರೆಸದೆ ಸೇವಿಸಬಹುದು). ಖಾಲಿ ಹೊಟ್ಟೆಗೆ ಸೇವಿಸುವುದರಿಂದ ಪ್ರಯೋಜನಗಳು ಹೆಚ್ಚು. ಬಾಣಂತಿಯರು ಮಾತ್ರವಲ್ಲದೆ ಯಾರುಬೇಕಾದರೂ ಈ ಆಹಾರ ಮಿತಿಯಾಗಿ ಸೇವಿಸಬಹುದು.



## ಪದ ಬಂಧ

ಜ್ಯೋತಿ ರಾಜೇಶ್






### ಎಡದಿಂದ ಬಲಕ್ಕೆ....

2. ಭೂತವಲ್ಲವಿದು ವರ್ಣನೆಗೆ ನಿಲುಕದ ಸೌಂದರ್ಯ (3)
5. ಹೆದರಿಕೆ ಹುಟ್ಟಿಸುವಂತಹದ್ದು ಕೊನೆಗೆ ದೀರ್ಘವಾಗಿದೆ (4)
6. 'ನೆತ್ತರಿನಿಂದ ಕೂಡಿದ' ಅನ್ನುವುದನ್ನು ಹೀಗೆ ಹೇಳಿ (4)
7. ಬರವಣಿಗೆಯ ರೂಪದಲ್ಲಿರುವುದು (3)
8. ಹಲಸಿನ ಹಣ್ಣಿನಿಂದ ಮಾಡುವ ಕರಿದ ತಿಂಡಿ (3)
9. ವಿರಮಿಸುವುದಲ್ಲವಿದು ಅಳುವ ಮಗುವನ್ನು ಸಮಾಧಾನಿಸುವುದು (3)
11. ರುದ್ರನಲ್ಲ ಮಿತಿ ಮೀರಿದ ಕೋಪದ ಭಾವ (2)
12. ಶ್ರೀ ನರಸಿಂಹರಾಜು ಅವರು ಹೆಸರಾಗಿದ್ದು ಈ ಥರದ ಅಭಿನಯಕ್ಕೆ (2)
13. ಹೇಗೆ ಓದಿದರೂ ಇದು ಚಿನ್ನವೇ (3)
15. ನಮಗೆಲ್ಲ ಬೆಳಕು ನೀಡುವ ಸೂರ್ಯನಿರುವುದು ಇಲ್ಲಿಯೇ (3)
17. ಕಲಸುಮೇಲೋಗರವಾಗಿರುವ 'ವೇಗ' (3)
19. ಇದು ಹಕ್ಕೀ ಅಲ್ಲ ಆದ್ರೆ ಹಾರ್ತೈತಲ್ಲ (4)
20. ನಮಗೆ ಬೆಳಕು ಕೊಡುವವನ ವಾರವಿದು (4)
21. ಅಸಹಾಯಕರನ್ನು ನೋಡಿದಾಗ ಮನದಲ್ಲಿ ಮೂಡುವ ಭಾವ (3)

### ಮೇಲಿನಿಂದ ಕೆಳಕ್ಕೆ.....

1. ಭಯ ಮತ್ತು ಅಸಹ್ಯವನ್ನು ಒಂದೇ ಬಾರಿ ಹುಟ್ಟಿಸುವ ದೃಶ್ಯ ಅಥವ ಮನದ ಭಾವ 3)
2. ಸಕಾಲದಲ್ಲಿ ನಡೆಯದಂಥ ಘಟನೆ....(4)
3. 'ವಿವಿಧ'ತೆಯನ್ನು ಹೀಗೂ ಹೇಳಬಹುದೆ?....(4)
4. ಕನ್ನಡ ಸಾಹಿತ್ಯದಲ್ಲಿ, ಚಿಕ್ಕದಾಗಿ ಬರೆಯುವ ಕವನದ (4 ಸಾಲಿನ) ಒಂದು ಪ್ರಕಾರವಿದು (3)
8. ಪ್ರಿಂಟರ್ ನ ಕನ್ನಡೀಕರಣವೇ ಇದು (3)
10. ಒಳ್ಳೆಯ ನಗೆ ಬೀರುವವ.....(3)
14. ತೆಂಗಿನಚಿಪ್ಪಲ್ಲ ಇದು ಪಂಚತಂತ್ರದಲ್ಲಿ ಬರುವ ಒಂದು ಬುದ್ಧಿವಂತ ಪ್ರಾಣಿಯ ಹೆಸರು (4)
15. ಹೆಚ್ಚಿನ ಸ್ತ್ರೀಯರಿಗೆ ಪ್ರಿಯವಾದದ್ದು ಅಂಗಡಿಯ ಹೆಸರೂ ಹೌದು.....(4)
16. ಅಲಂಕಾರ ಅಥವಾ ಮನದ ಒಂದು ಬಗೆಯ ಭಾವ .(3)
18. ಮೂರಕ್ಷರದ ರಾಜ (3)

# ತಿಳಿನೀರಲ್ಲೂ ರಾಡಿಯೆಬ್ಬಿಸುವ ಅಪ"ಕೀರ್ತಿ" ಯ ಪ್ರಲಾಪ..!



✍ಹಿರಿಯೂರು ಪ್ರಕಾಶ್

ಮೊನ್ನೆ ಭಾನುವಾರ ಭಾರತೀಯ ತಂಡ ಸತತ ಎರಡನೇ ಬಾರಿಗೆ ಟಿ.20 ವಿಶ್ವಕಪ್ ಕ್ರಿಕೆಟ್ ಗೆದ್ದ ನಂತರ ತಂಡದ ಕೋಚ್ ಗೌತಮ್ ಗಂಭೀರ್, ನಾಯಕ ಸೂರ್ಯಕುಮಾರ್ ಯಾದವ್ ಹಾಗೂ ಐಸಿಸಿ ಅಧ್ಯಕ್ಷ ಜಯ್ ಶಾ ಅಹಮದಾಬಾದ್ ನ ಕ್ರೀಡಾಂಗಣದ ಬಳಿಯಿರುವ ಹನುಮಾನ್ ಟೆಕ್ರಿ ದೇಗುಲಕ್ಕೆ ವಿಶ್ವಕಪ್ ಟ್ರೋಫಿಯೊಂದಿಗೆ ಹೋಗಿದ್ದನ್ನು ಭಾರತದ ಮಾಜಿ ಆಟಗಾರ ಕೀರ್ತಿ ಆಝಾದ್ ಟೀಕಿಸಿರುವುದು ಜಾಲತಾಣಗಳಲ್ಲಿ ವೈರಲ್ ಆಗಿದೆ.

ಕೀರ್ತಿ ಆಝಾದ್ ಹೇಳಿರುವಂತೆ , " ವಿಶ್ವ ಕಪ್ ಟ್ರೋಫಿಯೆಂಬುದು ಜಯ್‌ಶಾ, ಸೂರ್ಯಕುಮಾರ್ ಯಾದವ್ ರ ಸ್ವಂತ ಕುಟುಂಬಕ್ಕೆ ಸೇರಿದ್ದಲ್ಲ. ಅದು ಇಡೀ ಭಾರತೀಯರಿಗೆ ಸೇರಿದ್ದು. ಟೀಂ ಇಂಡಿಯಾ ಕೇವಲ ಒಂದು ಧರ್ಮವನ್ನು ಪ್ರತಿನಿಧಿಸದೇ ದೇಶದ ಎಲ್ಲಾ ಧರ್ಮಗಳನ್ನೂ ಪ್ರತಿನಿಧಿಸುತ್ತದೆ ಹಾಗೂ ತಂಡದಲ್ಲಿ ಎಲ್ಲಾ ಧರ್ಮಕ್ಕೆ ಸೇರಿದ ಆಟಗಾರರೂ ಇದ್ದಾರೆ. ಟ್ರೋಫ್ಷಿಯನ್ನು ಮೊಹಮ್ಮದ್ ಸಿರಾಜ್ ಮಸೀದಿಗೆ ಅಥವಾ ಸಂಜು ಸ್ಯಾಂಸನ್ ಚರ್ಚ್‌ಗೆ ತೆಗೆದುಕೊಂಡು ಹೋಗಿಲ್ಲ. ಹೀಗಿರುವಾಗ ವಿಶ್ವಕಪ್ ಅನ್ನು ಒಂದು ಧರ್ಮದ ದೇವಾಲಯಕ್ಕೆ ತೆಗೆದುಕೊಂಡು ಹೋಗಿದ್ದು ತಪ್ಪು" ಎಂಬುದು ಕೀರ್ತಿ ಆಝಾದ್ ನ ಸ್ಟ್ರಾಂಗ್ ಕಾಮೆಂಟು ಮತ್ತು ಆಕ್ಷೇಪ!

ಒಂದೇ ಸಾಲಿನಲ್ಲಿ ಈತನ ಮಾತುಗಳಿಗೆ ಪ್ರತಿಕ್ರಿಯಿಸುವುದಾದರೆ ಇದು ಅಸಂಬದ್ಧ ಅನಗತ್ಯ, ಹಾಗೂ ಅನಪೇಕ್ಷಿತ ಕಿರಿಕ್ಕು. !

ಕ್ರೀಡೆಯಲ್ಲಿ ಈ ಹಿಂದೆಲ್ಲಾ ರಾಜಕೀಯವನ್ನು ಬೆರೆಸಿ ಕಲುಷಿತಗೊಳಿಸಲಾಗುತ್ತಿತ್ತು. ಆದರೆ ಇತ್ತೀಚಿನ ಕೆಲ ವರ್ಷಗಳಿಂದ ಕ್ರೀಡೆಗೆ ರಾಜಕೀಯದ ಜೊತೆಗೆ ಧರ್ಮದ ರಂಗನ್ನೂ ಬೆರೆಸಿ ಕ್ರೀಡಾಸ್ಫೂರ್ತಿ ಎಂಬ ಪದವನ್ನೇ ಅಪಮೌಲ್ಯಗೊಳಿಸುತ್ತಿದ್ದಾರೆ. ವಿಶ್ವಕಪ್ ಗೆದ್ದಿದ್ದು ನೂರಾ ನಲವತ್ತು ಕೋಟಿ ಭಾರತೀಯರನ್ನು ಒಳಗೊಂಡ ಭಾರತ ಎಂಬ ದೇಶದ ಪರವಾಗಿ ಆಡಿದ ಹೆಮ್ಮೆಯ ತಂಡ. ಅಂತಹ ಸುಂದರ, ಸಮ್ಯಕ್ಯ ಪರಿಕಲ್ಪನೆಗೆ ಧಾರ್ಮಿಕ ಬಣ್ಣ ಹಚ್ಚಿ ಕಿಚ್ಚು ಹಚ್ಚುವ ಕೆಲಸವನ್ನು ಅದರಲ್ಲೂ ಈ ಹಿಂದೆ ಭಾರತಕ್ಕಾಗಿ ಆಡಿದ ಒಬ್ಬ ಮಾಜಿ ಕ್ರಿಕೆಟ್ ಆಟಗಾರ ಮಾಡಬಾರದಿತ್ತು.

ಸಾಮಾನ್ಯ ಭಾರತೀಯ ಕ್ರಿಕೆಟ್ ಪ್ರೇಮಿಗಳಿಗೆ ಇದಾವುದೂ ಮ್ಯಾಟರ್ರೇ ಅಲ್ಲ. ನಮ್ಮ ದೇಶ ವಿಶ್ವಕಪ್ ಗೆದ್ದಿರುವುದಷ್ಟೇ ಸಂತೋಷದ ವಿಷಯವೇ ವಿನಃ ಹನುಮಾನ್ ದೇವಾಲಯಕ್ಕೆ ಕೆಲ ನಿಮಿಷಗಳ ಕಾಲ ಟ್ರೋಫ್ಷಿಯೊಂದಿಗೆ ಹೋಗಿ ಕೈಮುಗಿದು ಹನುಮಾನ್ ಗೆ ಧನ್ಯವಾದ ಸಮರ್ಪಿಸಿದರೆ ಅದರಲ್ಲಿ ಯಾವ ಮಹಾಪರಾಧವಿದೆ.? ಭಜರಂಗಿಗೇ ಕೈಮುಗಿಯುವುದು ಈ ನಾಡಿನ ಜಾತ್ಯತೀತತೆ, ಧಾರ್ಮಿಕ ಸಮಾನತೆಗೆ ಧಕ್ಕೆ ತರುವಂತಹ ಸಮಾಚಾರವೇ..?

ಅದರಲ್ಲೂ ಹೇಳಿ ಕೇಳಿ ಆಂಜನೇಯನನ್ನು ಭಕ್ತಿಯಿಂದ ಜಾತಿ ಧರ್ಮ ವರ್ಗಗಳ ಬೇಧವಿಲ್ಲದೇ ಎಲ್ಲರೂ ಪೂಜಿಸುತ್ತಾರೆ. ನಾಡಿನ ಸಾಮಾನ್ಯ ನಾಗರಿಕರಿಗೆ ತಪ್ಪು ಎನಿಸದ ಅಥವಾ ಅವರ ದೃಷ್ಟಿಗೆ ಬೀಳದ ಇಂಥಾ ಸಾಮಾನ್ಯ ಅಂಶಗಳನ್ನು ವಿವಿಧ ಧರ್ಮೀಯರಲ್ಲಿ ಹುಳಿ ಹಿಂಡುವುದಕ್ಕಾಗಿ ಬಳಸಿಕೊಳ್ಳಲಿಕ್ಕಾಗಿ ಕೇವಲ ಕೀರ್ತಿ ಆಝಾದ್ ನಂತಹ ರಾಜಕೀಯ ವ್ಯಕ್ತಿಗಳು ಹಾತೊರೆಯುವುದು ಅವರ ಸಂಕುಚಿತತನದ ಸಂಕೇತವಷ್ಟೇ.

ವಾಸ್ತವ ವರ್ತಮಾನ



ಭಾರತ ತಂಡ ಕ್ರಿಕೆಟ್ ಆಡುವಾಗ, ಈ ನೆಲಕ್ಕೆ ಋಣಿಯಾಗಿರುವ, ಈ ಮಣ್ಣಿನ ಆಶ್ರಯದಲ್ಲಿರುವ ಹಾಗೂ ದೇಶಕ್ಕೆ ಬದ್ಧತೆಯಿರುವ ಪ್ರತಿಯೊಬ್ಬ ಕ್ರಿಕೆಟ್ ಪ್ರೇಮಿಯೂ ನಮ್ಮ ತಂಡವನ್ನು ಬೆಂಬಲಿಸಿ ಅದು ವಿಜಯಶಾಲಿಯಾಗಲಿ ಎಂದು ಪ್ರಾಮಾಣಿಕವಾಗಿ ಹಾರೈಸುತ್ತಾನೆ. ಮೈದಾನದಲ್ಲಿ ಸಂಜು ಸ್ಯಾಮ್ ಸನ್ ಅದ್ಭುತವಾಗಿ ಆಡಿದಾಗ ಪ್ರೇಕ್ಷಕರು, ವೀಕ್ಷಕರು ಆತನ ಧರ್ಮ ಯಾವುದೆಂದು ನೋಡಿ ಚಪ್ಪಾಳೆ ಹೊಡೆಯುವುದಿಲ್ಲ. ಹಾಗೆಯೇ ಹರ್ಷದೀಪ್ ಸಿಂಗ್ ಆಗಲೀ ಮೊಹಮ್ಮದ್ ಸಿರಾಜ್ ಆಗಲೀ ಉತ್ತಮ ಬೌಲಿಂಗ್ ನಿರ್ವಹಣೆ ಮಾಡಿದಾಗ ಅವರ ಧರ್ಮ ಯಾವುದೆಂದು ನೋಡಿ ಬೆಂಬಲಿಸುವುದಿಲ್ಲ. ಸಚಿನ್, ವಿರಾಟ್, ರೋಹಿತ್ ಶತಕ ಬಾರಿಸಿದಾಗ ಅವರ ರಾಜ್ಯ ಯಾವುದೆಂದು ಲೆಕ್ಕ ಹಾಕುವುದಿಲ್ಲ. ಅವರೆಲ್ಲಾ ವಿವಿಧ ಜಾತಿ –ಧರ್ಮ ರಾಜ್ಯಗಳಿಗೆ ಸೇರಿದವರಾಗಿದ್ದರೂ ಕ್ರಿಕೆಟ್ ಪ್ರೇಮಿಯ ದೃಷ್ಟಿಯಿಂದ ಅವರೆಲ್ಲಾ ನಮ್ಮ ಭಾರತ ತಂಡಕ್ಕಾಗಿ ಆಡುತ್ತಿರುವ ನಿಷ್ಠಾವಂತ ಭಾರತೀಯ ಆಟಗಾರರು ಅಷ್ಟೇ.

ಯಾವುದೇ ಧರ್ಮಕ್ಕೆ ಸೇರಿದ ಒಬ್ಬ ಸಾಮಾನ್ಯ ಕ್ರೀಡಾಪ್ರೇಮಿಗಾಗಲೀ ಅಥವಾ ಸ್ವತಃ ತಂಡದಲ್ಲಿನ ಇತರೆ ಧರ್ಮಕ್ಕೆ ಸೇರಿದ ಆಟಗಾರರಿಗಾಗಲೀ ಬಾರದ ಇಂತಹ ದುರಾಲೋಚನೆಗಳು , ಮನುಷ್ಯ ಮನುಷ್ಯನ ನಡುವೆ ಒಡಕು ಮೂಡಿಸುವ ಖತರ್ನಾಕ್ ಐಡಿಯಾಗಳು ಈ ಹಿಂದೆ 1983 ರಲ್ಲಿ ದೇಶಕ್ಕಾಗಿ ಪ್ರಥಮ ವಿಶ್ವಕಪ್ ಗೆದ್ದ ತಂಡದ ಭಾಗವಾಗಿದ್ದ ಒಬ್ಬ ಮಾಜಿ ಕ್ರಿಕೆಟರ್ ಬಾಯಿಂದ ಬಂದಿರುವುದು ವಿಷಾದನೀಯ. ಬಹುಶಃ ಆತ ಮಾಜಿ ಕ್ರಿಕೆಟರ್ ಆಗಿ ಉಳಿದಿದ್ದಲ್ಲಿ ಇಂತಹ ಸಂಕುಚಿತ ಯೋಚನೆಗಳು ಖಂಡಿತವಾಗಿ ಬರುತ್ತಿರಲಿಲ್ಲ. ಆದರೆ ಆತ ಕ್ರಿಕೆಟರ್ ಕಂ ಪೊಲಿಟಿಷಿಯನ್ ( ಹಾಲಿ ತೃಣಮೂಲ ಕಾಂಗ್ರೆಸ್ ಸಂಸದ ) ಆಗಿರುವುದರ ಪ್ರಭಾವದಿಂದ ಹೀಗೆಲ್ಲಾ ಹುಳುಕು ಹುಡುಕುವ ಅಥವಾ ಕಡ್ಡಿ ಆಡಿಸುವ ಯತ್ನಕ್ಕೆ ಕೈಹಾಕಿರಬಹುದು.

ವೈವಿಧ್ಯತೆಯ ನಡುವೆ ಏಕತೆಯಿರುವುದೇ ಭಾರತದ ಪಾರಂಪರಿಕ ಸೌಂದರ್ಯ. ಹಾಗಾಗಿಯೇ ಈ ನೆಲದಲ್ಲಿ ಎಲ್ಲಾ ಧರ್ಮೀಯರೂ ಸ್ವತಂತ್ರವಾಗಿ ಖುಷಿಯಿಂದ ಬದುಕುತ್ತಿರುವುದು. ಧರ್ಮ– ಧರ್ಮಗಳ ನಡುವೆ ಸಮಾನತೆ ,ಭ್ರಾತೃತ್ವ, ಸಹಿಷ್ಣುತೆ ಇನ್ನೂ ಉಳಿದಿರುವುದು. ಹೀಗಿರುವಾಗ ಕೀರ್ತಿ ಆಝಾದ್ ನಂತಹ ಮನಃಸ್ಥಿತಿಗಳು ಕ್ರೀಡಾಂಗಣದ ಬಳಿಯ ಹನುಮಾನ್ ದೇವಾಲಯಕ್ಕೆ ಟ್ರೋಫಿ ತೆಗೆದುಕೊಂಡು ಹೋಗಿದ್ದನ್ನೇ ಧಾರ್ಮಿಕ ಅಸಮಾನತೆ ಎಂಬ ವ್ಯಾಖ್ಯಾನ ಕೊಟ್ಟು ಜನರ ನಡುವೆ ಹುಳಿಹಿಂಡುವ ಸಿನಿಕತನ ತೋರುವುದನ್ನು ಬಿಟ್ಟು ಸಮಾಜದಲ್ಲಿ ಸಾಮಾಜಿಕ– ಧಾರ್ಮಿಕ ಸಹಿಷ್ಣುತೆಗಾಗಿ ಎಲ್ಲಾ ಜಾತಿ–ಧರ್ಮೀಯರಲ್ಲಿಯೂ ದೇಶಪ್ರೇಮ ಜಾಗೃತವಾಗಿಸುವಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡಿದಲ್ಲಿ ಈ ಮಣ್ಣಿನಲ್ಲಿ ಹುಟ್ಟಿದ ಋಣವನ್ನಾದರೂ ಸ್ವಲ್ಪಮಟ್ಟಿಗೆ ತೀರಿಸಬಹುದು.

ಒಬ್ಬ ರಾಜಕಾರಣಿಯಾಗಿ ಸಾಧ್ಯವಾದರೆ ಜನರಲ್ಲಿ ಪ್ರೀತಿ ಅರಳಿಸುವ ಕೆಲಸ ಮಾಡಿ ; ಆದರೆ ಉದ್ದೇಶಪೂರ್ವಕವಾಗಿ ದ್ವೇಷ ಕೆರಳಿಸುವ ನೀಚತನದ ಕೆಲಸ ಮಾಡಬೇಡಿ.

ಕೊನೇಪಕ್ಷ ಕ್ರೀಡೆಯನ್ನು ರಾಜಕೀಯ– ಧರ್ಮಗಳ ವಿವಾದದಿಂದ ದೂರವಿಡಿ.

**ಮರೆಯುವ ಮುನ್ನ:** ಕ್ರೀಡೆಯೆಂಬುದು ಕೇವಲ ಮೈದಾನದಲ್ಲಿ ಅಥವಾ ಒಳಾಂಗಣದಲ್ಲಿ ಆಡುವ ಆಟ ಮಾತ್ರವಲ್ಲ, ಬದಲಿಗೆ ಅದೊಂದು ಆಟಗಾರನಿಗೆ ತನ್ನ ಜಾತಿ ,ಧರ್ಮ, ವರ್ಗ, ಪ್ರಾದೇಶಿಕತೆ ಈ ಎಲ್ಲಕ್ಕಿಂತಲೂ ದೇಶವೇ ಮೊದಲು ಎನ್ನುವ ಮಾನಸಿಕ ವಿಕಸನದ ಭಾಗ, ಬದ್ಧತೆಯ ತಪಸ್ಸು. ದೇಶದ ವಿಷಯ ಅಂತ ಬಂದಾಗ ಹೇಗೆ ನಮ್ಮ ಗಡಿಕಾಯುವ ಸೈನಿಕರು ತಮ್ಮೆಲ್ಲಾ ವೈಯಕ್ತಿಕ ಜಾತಿ ಧರ್ಮಗಳನ್ನು ಬದಿಗೊತ್ತಿ ಈ ದೇಶಕ್ಕಾಗಿ ತ್ಯಾಗ ಮಾಡುತ್ತಾರೋ ಹಾಗೆಯೇ ದೇಶಕ್ಕಾಗಿ ಆಡುವಾಗ ಒಬ್ಬ ಕ್ರೀಡಾಪಟುವಿಗೆ ದೇಶವನ್ನು ಪ್ರತಿನಿಧಿಸುವ ಹೆಮ್ಮೆ ಇರುತ್ತದೆಯೇ ಹೊರತು ಅವನ ಜಾತಿ –ಧರ್ಮಗಳ ಹಂಗಲ್ಲ.!

ಈ ನಾಡಿನ ರಾಜಕೀಯ ಪಕ್ಷಗಳು, ರಾಜಕೀಯ ಮುಖಂಡರು ಕುಡಿಯುವ ತಿಳಿನೀರಲ್ಲಿ ರಾಡಿ ಎಬ್ಬಿಸುವ ಇಂತಹ ಕ್ಷುಲ್ಲಕ ವ್ಯಾಖ್ಯಾನಗಳಿಂದ ದೂರವಿದ್ದು ದೇಶಕ್ಕಾಗಿ ಏನಾದರೂ ಒಳ್ಳೆಯದನ್ನು ಮಾಡುವ ಚಿಂತನೆಗಳತ್ತ ಗಮನಹರಿಸಿದಲ್ಲಿ ಅವರಿಗೆ ಓಟು ಕೊಟ್ಟು ಜನಪ್ರತಿನಿಧಿಗಳನ್ನಾಗಿ ಆರಿಸಿದ್ದಕ್ಕೂ ಸಾರ್ಥಕ.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,